ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 ಸಂಚಿಕೆ 8 ಫೆಬ್ರವರಿ 24, 1980 40 ಪೈಸೆ

ಬೆಲೆಏರಿಕೆಯನ್ನು ಪ್ರತಿಭಟಿಸಿ

ಇತ್ತೀಚೆಗೆ ಸಕ್ಕರೆ ಬೆಲೆ ಗಗನಕ್ಕೇರಿದೆ. ಈಗ ಕೆ.ಜಿ.ಗೆ ರೂ. 7 ರಂತೆ ಮಾರಾಟವಾಗುತ್ತಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದು 32 ವರ್ಷಗಳಲ್ಲಿ ಸಕ್ಕರೆಯ ಬೆಲೆ ಈ ಮಟ್ಟಕ್ಕೇರಿರುವುದು ಇದೇ ಮೊದಲು. ಸಾಮಾನ್ಯ ಜನ ನಿತ್ಯ ಉಪಯೋಗಿಸುವ ಈ ಸಾಮಗ್ರಿಯ ಬೆಲೆಯು ಹೀಗೆ ದುಬಾರಿಯಾಗಿ ಜನರನ್ನು ಅತ್ಯಂತ ಕಷ್ಟಕ್ಕೀಡು ಮಾಡಿದೆ. ಅಡಿಗೆಗೆ ಉಪಯೋಗಿಸುವ ಕಡಲೇಕಾಯಿ ಎಣ್ಣೆಯ ಬೆಲೆಯೂ ದುಬಾರಿಯಾಗಿದೆ.

ಈಗ ಕೇಂದ್ರದಲ್ಲಿ ಕಾಂಗ್ರೆಸ್ ಸರಕಾರವಿದೆ. ಚುನಾವಣಾ ಕಾಲದಲ್ಲಿ ಜನತಾ ಸರಕಾರದ ಧೋರಣೆಗಳಿಂದ ಬೆಲೆಗಳು ಏರಿವೆಯೆಂಬುದಾಗಿ ಇಂದಿರಾ ಕಾಂಗ್ರೆಸ್ಸಿನವರು ಪ್ರಚಾರ ಮಾಡಿದರು. ಆದರೆ ಈಗ ತಾವೇ ಅಧಿಕಾರಕ್ಕೆ ಬಂದ ನಂತರ ಎರಡು ತಿಂಗಳೊಳಗೆ ಏನಾಗಿದೆ? ಕೆ.ಜಿ.ಗೆ ರೂ. 4ರಂತೆ ಮಾರಾಟವಾಗುತ್ತಿದ್ದ ಸಕ್ಕರೆ ಈಗ ರೂ. 7ಕ್ಕೇರಿದೆ. ಕೆ.ಜಿ.ಗೆ ರೂ. 6 ರಂತೆ ದೊರೆಯುತ್ತಿದ್ದ ಎಣ್ಣೆಗೆ ಈಗ 10 ರೂಪಾಯಿಯಾಗಿದೆ. ಇದು ಬಡವರ ಉದ್ಧಾರ ಮಾಡುವ ಸರಕಾರದ ನೀತಿ. ಸರಕಾರದ ವರ್ಗಗುಣ ಇದರಿಂದಲೇ ಸ್ಪಷ್ಟವಾಗಿದೆ.

ಇಂದಿರಾಗಾಂಧಿ ಸರಕಾರ ಅಧಿಕಾರಕ್ಕೆ ಬಂದಾಗಿನಿಂದ ಅನೇಕ ಅವಸರದ ಕ್ರಮಗಳನ್ನು ಕೈಗೊಂಡಿದೆ. ಹಲವಾರು ಹಿರಿಯ ಅಧಿಕಾರಿಗಳ

ಸಂಪಾದಕೀಯ

ಮೇಲೆ ಕ್ರಮ ತೆಗೆದುಕೊಂಡಿದೆ. ಅವರನ್ನು ವರ್ಗಾವಣೆ ಮಾಡುತ್ತಿದೆ. ಕೆಳಗಿನ ಅಧಿಕಾರಿಗಳನ್ನು ಮೇಲಿನ ಹುದ್ದೆಗಳಿಗೆ ಬಡ್ತಿ ಕೊಡುತ್ತಿದೆ. ತುರ್ತು ಪರಿಸ್ಥಿತಿಯ ಕಾಲದಲ್ಲಿ ಕಾನೂನುಗಳ ಉಲ್ಲಂಘನೆ ಮಾಡಿ ದಬ್ಬಾಳಿಕೆ ನಡೆಸಿದ್ದ ಕುಪ್ರಸಿದ್ಧ ಅಧಿಕಾರಿಗಳನ್ನೆಲ್ಲಾ ಜವಾಬ್ದಾರಿ ಸ್ಥಾನಗಳಲ್ಲಿ ನೇಮಕ ಮಾಡಲಾಗುತ್ತಿದೆ. ಹಿಂದಿನ ದುಷ್ಟಕೂಟ ಸ್ವೇಚ್ಛಾವೃತ್ತಿಯಾಗಿ ವರ್ತಿಸುತ್ತಿದೆ. ಈಗ 9 ರಾಜ್ಯಗಳ ಶಾಸನಸಭೆಗಳನ್ನು ವಿಸರ್ಜನೆ ಮಾಡಿ ಪ್ರಜಾಪ್ರಭುತ್ವಕ್ಕೆ ದೊಡ್ಡ ಏಟು ಕೊಟ್ಟಿದೆ.

ಕಾಳಸಂತೆಕೋರರನ್ನು ಮಟ್ಟಹಾಕುವ ಅಧಿಕಾರವಿರಬೇಕೆಂಬ ನೆಪದಲ್ಲಿ ಸ್ಥಾನಬದ್ಧತಾ ಶಾಸನವನ್ನೂ ಜಾರಿಗೊಳಿಸಲಾಯಿತು. ಸರಕಾರ ತೆಗೆದುಕೊಳ್ಳುತ್ತಿರುವ ಕ್ರಮಗಳಿಂದ ಕಾಳಸಂತೆಕೋರರೂ, ಕಳ್ಳ ದಾಸ್ತಾನುಗಾರರೂ ಹೆದರಿ ನಡುಗುತ್ತಿರಬೇಕು. ಬೆಲೆಗಳು ಇಳಿಯಬೇಕಿತ್ತು. ಆದರೆ ವಾಸ್ತವವಾಗಿ ಅದರಿಂದ ಬೆಲೆಗಳು ಇಳಿಯುವ ಬದಲಾಗಿ ಏರುತ್ತಿವೆ. ಇದಕ್ಕೆ ಸರಕಾರದ ಪ್ರೋತ್ಸಾಹವಿದೆಯೆಂಬುದಾಗಿ ಜನ ತಿಳಿದರೆ ತಪ್ಪಾಗಲಾರದು.

[ಕಡೆಯ ಪುಟ ನೋಡಿ]

ಜನತಂತ್ರಕ್ಕೆ ಗ್ರಹಣ

ಸೂರ್ಯ ಗ್ರಹಣದ ಬಗ್ಗೆ ಪತ್ರಿಕೆಗಳು ನೀಡಿದ ಅಬ್ಬರದ ಪ್ರಚಾರದಿಂದಾಗಿ ಪ್ರಳಯಕಾಲ ಸಮೀಪಿಸಿತೇನೋ ಎಂದು ಕತ್ತಲೆ ಮನೆಗಳಲ್ಲಿ ಸೇರಿಕೊಂಡು, ಬೀದಿಗಳನ್ನು ಸ್ಮಶಾನ ಮೌನದ ಪಾಲಿಗೆ ಬಿಟ್ಟು ಕುಳಿತಿದ್ದ ಜನತೆಗೆ ಇದೇ ಲಕ್ಷಣಗಳನ್ನುಳ್ಳ ರಾಜಕೀಯ ಗ್ರಹಣ ನಾಳೆ ಸಂಭವಿಸಲಿದೆ ಎಂದು ಬಹುಶಃ ಊಹಿಸಲಿಕ್ಕೆ ವ್ಯವಧಾನವಿರಲಿಲ್ಲ.

ಸೂರ್ಯ ಗ್ರಹಣದ ಮಾರನೆಯ ದಿನ ಅಂದರೆ ತಾ|| 18-2-80ರಂದು ಭಾರತದ ಸಂವಿಧಾನಕ್ಕೆ, ಜನತಂತ್ರಕ್ಕೆ ಸಹಾ ಗ್ರಹಣ ಗ್ರಹಣಕ್ಕೆ ಕಾರಣ ಕರ್ತರಾದ ರಾಹು, ಕೇತುಗಳು ಯಾರು ಎಂಬುದನ್ನು ಹೆಸರಿಸುವುದು ಅನವಶ್ಯಕವಾದರೂ ಶ್ರೀಮತಿ ಇಂದಿರಾಗಾಂಧಿ, ಸಂಜಯಗಾಂಧಿ ಎಂದು ಹೇಳಲೇಬೇಕು.

ಲೋಕಸಭಾ ಚುನಾವಣೆಯಲ್ಲಿ ಕೇವಲ ಶೇಕಡ 42ರಷ್ಟು ಮತಪಡೆದ ಕಾಂಗ್ರೆಸ್ ಪಕ್ಷ ಸಂಸತ್ತಿನಲ್ಲಿ ಬಹುಮತ ಸಿಕ್ಕಿದ ಕಾರಣ, ತುರ್ತುಪರಿಸ್ಥಿತಿಯನ್ನು ಜನರು ಅಂಗೀಕರಿಸಿದ್ದಾರೆಂದು ಭಾವಿಸಿರುವುದಲ್ಲದೆ, ಏಕ ವ್ಯಕ್ತಿಯ, ಏಕ ಪಕ್ಷದ ಅಧಿಕಾರ ಸ್ಥಾಪನೆಗೆ ಸಮ್ಮತಿಸಿದ್ದಾರೆಂದು ಭಾವಿಸಿದ್ದಾರೆ.

ಕಾಂಗ್ರೆಯೇತರ ಒಂಭತ್ತು ರಾಜ್ಯಗಳಾದ ಉತ್ತರ ಪ್ರದೇಶ, ಬಿಹಾರ, ಗುಜರಾತ್, ಮಹಾರಾಷ್ಟ್ರ, ತಮಿಳುನಾಡು, ರಾಜಾಸ್ಥಾನ್, ಮಧ್ಯಪ್ರದೇಶ, ಪಂಜಾಬ್ ಮತ್ತು ಒರಿಸ್ಸಾ ರಾಜ್ಯಗಳ ವಿಧಾನಸಭೆಗಳನ್ನು ಸಂವಿಧಾನದ 356ನೇ ವಿಧಿಯನ್ವಯ ವಜಾ ಮಾಡಿರುವ ರಾಷ್ಟ್ರಪತಿಯವರು ವಜಾ ಮಾಡಲು ಯಾವ ಕಾರಣಗಳನ್ನೂ ನೀಡಿಲ್ಲ.

1977ರಲ್ಲಿ ಜನತಾಪಕ್ಷ ಇಂತಹ ಕ್ರಮಗಳನ್ನೇ ಕೈಗೊಂಡಿರಲಿಲ್ಲವೇ ಎನ್ನುವುದು ಕಾಂಗ್ರೆಸ್‌ನವರ ಅಂಬೋಣ. 1977ರಲ್ಲಿ ವಜಾ ಆದ ರಾಜ್ಯ ಸರಕಾರಗಳು ಐದು ವರ್ಷದ ಅವಧಿಗಾಗಿ ಆಯ್ಕೆಯಾಗಿ ಅಕ್ರಮವಾಗಿ ತುರ್ತು ಪರಿಸ್ಥಿತಿಯಲ್ಲಿ ತಂದ ಸಂವಿಧಾನ ತಿದ್ದುಪಡಿಯಿಂದ ಆರು ವರ್ಷಗಳವರೆಗೆ ಮುಂದುವರಿದವು. ಜನತೆಯ ಆಶೋತ್ತರದಂತೆ ಅವುಗಳನ್ನು ವಜಾ ಮಾಡಬೇಕಾಯಿತು. ಇಂದಿನ ಕ್ರಮಕ್ಕೆ ಅಂತಹ ಯಾವುದೇ ಸಂವಿಧಾನಾತ್ಮಕ ಸಮರ್ಥನೆ ಇಲ್ಲ. ಅಧಿಕಾರ ದಾಹ ಒಂದೇ ಪ್ರೇರಣೆ.

ಸುಭದ್ರ ಸರಕಾರದ ಆಶ್ವಾಸನೆ ನೀಡಿ ಅಧಿಕಾರಕ್ಕೆ ಬಂದ ಇಂದಿರಾ ಗಾಂಧಿಯವರು ಪಕ್ಷಾಂತರ ರಾಜಕೀಯದಿಂದ ರಾಜ್ಯ ಸರಕಾರಗಳನ್ನು ಅಭದ್ರ ಮಾಡಲಾರಂಭಿಸಿದರು. ವಿರೋಧ ಪಕ್ಷಗಳು ಒಂದಾಗಿರುವುದನ್ನು ಕಂಡು ಪಕ್ಷಾಂತರದಿಂದಲೇ ಎಲ್ಲಾ ರಾಜ್ಯ ಸರಕಾರಗಳನ್ನು ಉರುಳಿಸುವ ಆಸೆಯಿಟ್ಟುಕೊಂಡಿದ್ದರು. ಕರ್ನಾಟಕ, ಹರಿಯಾಣ, ಗೋವಾ

[ಕಡೆಯ ಪುಟ ನೋಡಿ]

ಕೇರಳದಲ್ಲಿ ಇಂದಿರಾ ಸೋಲು : ರಾಜಕೀಯಕ್ಕೆ ಹೊಸ ತಿರುವು

ಕೇರಳ ರಾಜ್ಯದ ವಿಧಾನಸಭೆಗೆ ಇತ್ತೀಚಿಗೆ ನಡೆದ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ ಪಕ್ಷದ ಪರಾಭವವು ರಾಷ್ಟ್ರದ ರಾಜಕೀಯಕ್ಕೇ ಹೊಸ ತಿರುವು ನೀಡಿದೆ ಎಂದು ಲೋಕಸಭಾ ಸದಸ್ಯ ಕಾಂ. ರಾಮಣ್ಣರೈ ಅವರು ಹೇಳಿದರು.

ಕರ್ನಾಟಕ ಪ್ರಗತಿಪರ ರಂಗವು ಫೆ. 17ರಂದು ಬೆಂಗಳೂರಿನಲ್ಲಿ ಏರ್ಪಡಿಸಿದ್ದ 'ಕೇರಳ ವಿಜಯೋತ್ಸವ' ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದ ರೈ ಅವರು, ಕೇರಳ ವಿಧಾನಸಭಾ ಚುನಾವಣೆಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಎಡ ಮತ್ತು ಪ್ರಜಾಪ್ರಭುತ್ವ ರಂಗ ಗೆಲ್ಲದೇ ಇದ್ದಿದ್ದರೆ ಇಂದಿರಾಗಾಂಧಿಯವರು ಇಷ್ಟೊತ್ತಿಗೆ ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶ ಮುಂತಾದ ಕಾಂಗ್ರೆಸ್ಸೇತರ ವಿಧಾನಸಭೆಗಳನ್ನು ವಿಸರ್ಜಿಸುತ್ತಿದ್ದರು ಎಂದರು.

ರಾಷ್ಟ್ರದ ಪ್ರಧಾನಿಯಾಗಿ ಮತ್ತೆ ಅಧಿಕಾರ ವಹಿಸಿಕೊಂಡ ಇಂದಿರಾ ಗಾಂಧಿಯವರು ಪ್ರಪ್ರಥಮವಾಗಿ ಭೇಟಿಕೊಟ್ಟಿದ್ದು ಕೇರಳಕ್ಕೆಂತಲೂ, ಈ ಭೇಟಿಯು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಎಡ ಹಾಗೂ ಪ್ರಜಾಸತ್ತಾತ್ಮಕ ರಂಗವನ್ನು ಸೋಲಿಸುವುದಕ್ಕಾಗಿಯೂ ಇತ್ತೆಂದ ರಾಮಣ್ಣರೈ, ಕೇರಳದಲ್ಲಿ 'ಇಂದಿರಾ ಗಾಳಿ' ಬೀಸಲೇ ಇಲ್ಲ ಎಂದರು. ದುಡಿಯುವ ಜನತೆಯ ಸಂಘಟನೆಗಳು ಬಲವಾಗಿದ್ದು, ಸಿ.ಪಿ.ಐ. (ಎಂ) ಮತ್ತು ಸಿ.ಪಿ.ಐ. ಪಕ್ಷಗಳು ಸರಿಯಾದ ನಾಯಕತ್ವ ಕೊಟ್ಟಿದ್ದು ಮತ್ತು ಕೇರಳದ ಜನತೆ ವಿಚಾರವಂತರಾಗಿರುವುದು ಇದಕ್ಕೆ ಕಾರಣವೆಂದರು ಕಾಂ. ರೈ.

ಲೋಕಸಭೆಯ 542 ಸ್ಥಾನಗಳಲ್ಲಿ ತಮ್ಮ ಪಕ್ಷಕ್ಕೆ 352 ಸ್ಥಾನಗಳು ಬಂದಿರುವುದರಿಂದ ದೇಶದ ಜನರು ತುರ್ತುಪರಿಸ್ಥಿತಿಯನ್ನು ಮತ್ತು ಆಗ ನಡೆದ ಅತಿರೇಕಗಳನ್ನು ಮಾನ್ಯತೆ ಮಾಡಿದ್ದಾರೆ ಎಂದು ಹೇಳುತ್ತಿರುವ ಇಂದಿರಾಗಾಂಧಿಯವರು, ತಮಗೆ ಬಂದಿರುವುದು ಕೇವಲ ಶೇ. 42ರಷ್ಟು ಮತಗಳು ಮಾತ್ರ ಎಂಬುದನ್ನು ಮರೆಯದಿರಲಿ ಎಂದು ಎಚ್ಚರಿಸಿದರು. ಇಂದಿರಾ ಕಾಂಗ್ರೆಸ್ಸಿನ ವಿರುದ್ಧ ಬಂದಿರುವ ಶೇ. 58ರಷ್ಟು ಮತಗಳು ತುರ್ತುಪರಿಸ್ಥಿತಿಯ ಮತ್ತು ಆಗ ನಡೆದ ಅತಿರೇಕಗಳ ವಿರುದ್ಧ ಬಂದ ಮತಗಳು ಎಂಬುದಾಗಿ ಕಾಂ. ರೈ ಅಭಿಪ್ರಾಯಪಟ್ಟರು.

ಕರ್ನಾಟಕದಲ್ಲಿ ಅಲ್ಪ ಸ್ವಲ್ಪ ಸುಧಾರಣೆಗಳನ್ನು ಮಾಡಿದ ಶ್ರೀ ದೇವರಾಜ ಅರಸರ ಬಗ್ಗೆ ಮೆಚ್ಚಿಗೆಯ ಮಾತುಗಳನ್ನಾಡಿದ ಮಾರ್ಕ್ಸ್‌ವಾದಿ ನಾಯಕ ರೈಯವರು ಕೆಲಸವನ್ನು ತಾವು ಮಾಡಿ ಹೆಸರನ್ನು ಇಂದಿರಾ ಗಾಂಧಿಗೆ ತಂದುಕೊಟ್ಟ ಅರಸು ಬಗ್ಗೆ ಮರುಕ ವ್ಯಕ್ತಪಡಿಸಿದರು. ಸರ್ವಾಧಿಕಾರಿ ಶಕ್ತಿಗಳನ್ನು ಸೋಲಿಸಲು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಬೇಕೆಂಬುದನ್ನು ಅರಸು ಕಾಂಗ್ರೆಸ್ ಪಕ್ಷದವರು ಅರಿತುಕೊಳ್ಳುತ್ತಿರುವುದು ಶುಭ ಸೂಚನೆ ಎಂದೂ ಸಹ ರೈ ನುಡಿದರು.

ಇಂದಿರಾಗಾಂಧಿ ಮತ್ತು ಆಕೆಯ ಪಕ್ಷವನ್ನು ಕಾಗದದ ಹುಲಿ ಎಂದು ಕರೆದ ಸಿ.ಪಿ.ಐ.(ಎಂ) ನಾಯಕ ರೈ ಅವರು, ವಿರೋಧ ಪಕ್ಷಗಳು ಒಗ್ಗಟ್ಟಾದರೆ, ಸರ್ವಾಧಿಕಾರಿಗಳ ಸೋಲು ಖಚಿತ ಎಂಬುದು ಕೇರಳ ಚುನಾವಣೆಯಿಂದ ಗೊತ್ತಾಗಿದೆ ಎಂದರು. ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಗ್ಗಟ್ಟಾದರೆ; ಲಂಚರುಶುವತ್ತಿಲ್ಲದ ದಕ್ಷ ಹಾಗೂ ಶುದ್ಧ ಆಡಳಿತವನ್ನು ದೇಶದ ಜನತೆಗೆ ಒದಗಿಸಬಹುದೆಂಬುದನ್ನು ಬಂಗಾಳ, ತ್ರಿಪುರ ಮತ್ತು ಕೇರಳದ ಸರ್ಕಾರಗಳು ತೋರಿಸಿಕೊಟ್ಟಿವೆ ಎಂದು ಘೋಷಿಸಿದ ರಾಮಣ್ಣರೈ, ಇಂದು ಕೇರಳದಲ್ಲಾಗಿರುವ ರಾಜಕೀಯ ಬದಲಾವಣೆ ನಾಳೆ ಕರ್ನಾಟಕದಲ್ಲಿಯೂ ನಡೆಯಲಿ ಎಂದು ಹೇಳಿ ಸುಮಾರು 65 ನಿಮಿಷಗಳ ತಮ್ಮ ಕನ್ನಡ ಭಾಷಣವನ್ನು ಮುಗಿಸಿದರು.

[ಕಡೆಯ ಪುಟ ನೋಡಿ]

ಕಾಂಗ್ರೆಸ್ ಸರಕಾರದಿಂದ ಸುಲಿಗೆಗೆ ಪ್ರೋತ್ಸಾಹ!

ಕಳೆದ ತಿಂಗಳು 'ಕರ್ನಾಟಕ ಎಜುಕೇಶನಲ್ ಅಂಡ್ ಕಲ್ಚರಲ್ ಸೊಸೈಟಿ' ಎಂಬ ಸಂಸ್ಥೆಯವರು ಬೆಂಗಳೂರಿನ ರಾಜಮಹಲ್ ಗುಟ್ಟಹಳ್ಳಿಯಲ್ಲಿ ಮುಖ್ಯ ವೃತ್ತದ ಬಳಿಯಿರುವ ದೊಡ್ಡ ಕಟ್ಟಡವೊಂದರಲ್ಲಿ ನಡೆಸುತ್ತಿರುವ ಶಾಲೆಯಲ್ಲಿ ಅಕ್ರಮ ಡೊನೇಷನ್ ವ್ಯವಹಾರ ಹಾಗೂ ಸಂಸ್ಥೆಯವರು ಪೋಷಕರಿಗೆ ತೋರಿಸುತ್ತಿರುವ ಅಮಾನವೀಯ ವರ್ತನೆಯ ವಿರುದ್ಧ ಅನೇಕ ಪ್ರಗತಿಪರ ಸಂಘಟನೆಗಳು "ನಾಗರೀಕ ಹೋರಾಟ ವೇದಿಕೆ" ನೇತೃತ್ವದಲ್ಲಿ ಪ್ರತಿಭಟನೆ ವ್ಯಕ್ತಪಡಿಸಿದ್ದವು. ಪ್ರದರ್ಶನಕಾರರ ಪ್ರತಿನಿಧಿಗಳೊಂದಿಗೆ ಮಾತನಾಡಿದ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ತಮ್ಮ ಶಾಲೆ ವಿದ್ಯಾರ್ಥಿಯ ಪೋಷಕರಾದ ಟಿ.ಜಿ. ರಾಘವ ಅವರಿಗೆ ಕಾರ್ಯದರ್ಶಿಗಳು ಹೊಡೆದ ತಪ್ಪಿಗಾಗಿ ಸಂಸ್ಥೆಯಿಂದ ಅಧಿಕೃತ ಕ್ಷಮಾಪಣೆ ಕೇಳುವುದಾಗಿಯೂ, ಕಾರ್ಯದರ್ಶಿಗಳು ರಾಜೀನಾಮೆ ಕೊಡುವಂತೆ ಮಾಡುತ್ತೇನೆ. ಇನ್ನು ಮುಂದೆ ಡೊನೇಷನ್ ಕಡ್ಡಾಯವಾಗಿ ವಸೂಲು ಮಾಡುವುದಿಲ್ಲವೆಂದು ಭರವಸೆ ನೀಡಿದರು.

ನಮ್ಮ ಶಿಕ್ಷಣ ಕ್ಷೇತ್ರದ ಅನಿಷ್ಟಗಳಲ್ಲಿ ಒಂದಾದ ಡೊನೇಷನ್ ಪದ್ಧತಿಯನ್ನು ಒಂದು ಪ್ರತಿಭಟನಾ ಪ್ರದರ್ಶನದಿಂದ ತೊಲಗಿಸುವುದು ಸಾಧ್ಯವಿಲ್ಲವಾದರೂ, ಇನ್ನು ಮುಂದೆ ಗಮನಕ್ಕೆ ಬರುವ ಸುಲಿಗೆ ಶಾಲಾ ಸಂಸ್ಥೆಗಳ ಮುಂದೆ ಇದೇ ರೀತಿ ಪ್ರತಿಭಟಿಸುವುದೆಂದು ತೀರ್ಮಾನವಾಯಿತು. ಆದರೆ ನಮ್ಮ ವ್ಯವಸ್ಥೆಯ ಅಡಿಪಾಯವನ್ನು ಹಿಡಿದಿರುವ ವ್ಯಕ್ತಿಗಳು ಸುಮ್ಮನೆ ಕೂತಿಲ್ಲ. ಪ್ರತಿಭಟನೆ ಮಾಡಿದವರಿಗೆ ಅವರು ಒಂದು ಎಚ್ಚರಿಕೆ ನೋಟೀಸು ಕೊಟ್ಟಿದ್ದಾರೆ. ಸರಕಾರ, ಪೋಲೀಸ್ ತಮ್ಮ ಕಡೆಯಿದೆ ಎಂದು ಎಚ್ಚರಿಸಿದ್ದಾರೆ. ಡೊನೇಷನ್ ಕೊಡದೇ ಇರುವುದು ಅವಮಾನ, ರಾಘವರ ಪತ್ನಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ, ರಾಘವರ ತಲೆ ಅಸ್ವಸ್ಥವಾಗಿದೆ, ನೀವು ಬಂದು ಶರಣಾಗತರಾಗಿ ಇಲ್ಲವೇ ಪರಿಣಾಮ ಎದುರಿಸಿ ಎಂದು ಮುಂತಾಗಿ ಸರಿಯಾದ ವಿಳಾಸವಿಲ್ಲದ ವ್ಯಕ್ತಿಯೊಬ್ಬ ಪ್ರತಿಭಟನೆಯ ನೇತೃತ್ವ ವಹಿಸಿದ್ದ ಡಾ|| ಜಿ. ರಾಮಕೃಷ್ಣರವರಿಗೆ ಬೆದರಿಕೆ ಹಾಕಿದ್ದಾರೆ. ನಮ್ಮ ಸಮಾಜದ ಅನಿಷ್ಟಗಳ ನಟರ ಅಂತರಂಗವನ್ನು ಬಹಿರಂಗವಾಗಿಸುವ ಪತ್ರದ ಸಂಕ್ಷಿಪ್ತ ಭಾಷಾಂತರವನ್ನು ಕೊಡಲಾಗಿದೆ.

ಮಿಸ್ಟರ್ ಲೀಲಾರಾವ್
ಪ್ಯಾಲೇಸ್ ಗುಟ್ಟಹಳ್ಳಿ
ಬೆಂಗಳೂರು-560 003

24-1-80
ಬೆಂಗಳೂರು

ಪ್ರಿಯ ಕಾಮ್ರೇಡ್,

ವಿಶ್ವವಿದ್ಯಾಲಯದಲ್ಲಿ ನಿನ್ನಂತೆ ಪ್ರವಚನಗಾರನಾಗಿರುವವನ ಪತ್ರವನ್ನು ಓದಿ ನಿಮಗೆ ಆಶ್ಚರ್ಯವಾಗಬಹುದು. ಈ ಪತ್ರವನ್ನು ರಾಘವ ಅವರ ಮನೆಯಲ್ಲಿ ಸಂಪೂರ್ಣ ಸಾಮರಸ್ಯವನ್ನು ಮೂಡಿಸುವ ಉದ್ದೇಶದಿಂದ ಬರೆಯಲಾಗಿದೆ. ಇತ್ತೀಚಿನ ಘಟನೆಗಳು ಶ್ರೀಮತಿ ರಾಘವ ಅವರನ್ನು ಅಸ್ವಸ್ಥಗೊಳಿಸಿವೆ. ಶಾಲೆಯ ಅಧಿಕಾರಿಗಳೊಂದಿಗೆ ರಾಘವ ಅವರು ಜಗಳವಾಡಿದ ದಿನ ಬೆಳಗ್ಗೆ ತಂದೆಯೊಂದಿಗೆ ಜಗಳದಲ್ಲಿ ತೊಡಗಿದ್ದರು. ಅದೇ ಸಿಟ್ಟಿನಲ್ಲಿ ಹೋಗಿ ವಿಷಯವನ್ನು ಕೆದಕಿದ್ದಾರೆಂದು ಶ್ರೀಮತಿ ರಾಘವ ತಿಳಿಸಿದ್ದಾರೆ ಅಲ್ಲದೆ ಇವೆಲ್ಲಾ ಘಟನೆಗಳಿಗೆ ಅವರಿಗೆ ಹೊಸದಾಗಿ ಹುಟ್ಟಿದ ಮಗುವಿನ ನಕ್ಷತ್ರ ದೋಷ (ಮೂಲಾ ನಕ್ಷತ್ರ)ವೇ ಕಾರಣವೆಂದು ಸಹಾ ಶ್ರೀಮತಿ ರಾಘವ ತಿಳಿಸಿದರು. ಇವೆಲ್ಲಾ ಘಟನೆಗಳಿಂದ ತಾಂಗೆ ಬದುಕಿನಲ್ಲಿ ಬೇಸರವಾಗಿದೆ. ತಮ್ಮ ಗಂಡ ಇನ್ನು ಮುಂದೆಯೂ ಇಂತಹ ಪ್ರತಿಭಟನೆಗಳಲ್ಲಿ ಭಾಗವಹಿಸಿದರೆ ಮಗುವಿನೊಂದಿಗೆ ಆತ್ಮಹತ್ಯೆ ಮಾಡಿಕೊಳ್ಳುವದಾಗಿ ಹೇಳಿದ್ದಲ್ಲದೆ ಶಾಲಾ ಅಧಿಕಾರಿಗಳೊಂದಿಗೆ ವಿನಾ ಕಾರಣ ವಾಗ್ಯುದ್ಧ ಮಾಡಿದ್ದನ್ನು ಖಂಡಿಸಿದರು. ಪ್ರತಿ ವರ್ಷದಂತೆ ಈ ವರ್ಷವೂ ಪೂರ್ತಿ ಡೊನೇಷನ್ ಹಣ ಕಟ್ಟುವುದಾಗಿಯೂ ನಡೆದ ಘಟನೆಯನ್ನು ಕೆಟ್ಟ ಕನಸೆಂದು ಮರೆತುಬಿಡಬೇಕೆಂದು ಶಾಲಾ ಅಧಿಕಾರಿಗಳಿಗೆ ಅವರು ತಿಳಿಸಿದ್ದಾರೆ. ತಮ್ಮ ಮಗಳು ಶಾಲೆಯ ಉಳಿದ ಮಕ್ಕಳಿಂದ ಸಾಮಾಜಿಕ ಬಹಿಷ್ಕಾರ ಪಡೆಯುವುದು ಅವರಿಗೆ ಇಷ್ಟವಿಲ್ಲ. ತನಗಿಂತಲೂ ಬಡವರಾದ ಮಕ್ಕಳು ಡೊನೇಷನ್ ಕೊಡುವಾಗ, ತಾನು ಉಚಿತ ವಿದ್ಯಾಭ್ಯಾಸ ಪಡೆಯುವುದು ತನ್ನ ಗೌರವಕ್ಕೆ ಕಂದೆಂದು ಮಗು ಕೂಡ ಭಾವಿಸುತ್ತದೆ. ಆ ಹೆಂಗಸಿನ ಬಗ್ಗೆ ನನಗೆ ಕನಿಕರವಾಗುತ್ತಿದೆ. ಆದ್ದರಿಂದ ಸಂಸಾರದಲ್ಲಿ ಸಂಪೂರ್ಣ ಸಾಮರಸ್ಯ ಮೂಡಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇತ್ತೀಚಿನ ದಿನಗಳಲ್ಲಿ ತಮ್ಮ ಕುಟುಂಬ ವರ್ಗದವರೊಂದಿಗೆ ಶ್ರೀ ರಾಘವರ ವರ್ತನೆ ಸರಿಯಿಲ್ಲವೆಂದು ತೋರುತ್ತೆ.

ಶಾಲೆಯ ಹಿತೈಷಿಗಳು ರಾಜಕೀಯ ಪ್ರಭಾವಗಳ ಮೂಲಕ ಸರ್ಕಾರದ ಉನ್ನತ ಅಧಿಕಾರಿಗಳನ್ನು ಹಾಗೂ ಮಾನ್ಯ ಮುಖ್ಯ ಮಂತ್ರಿಗಳನ್ನು ಕಂಡು ವಿಷಯವನ್ನು ತಿಳಿಸಿದ್ದಾರೆ. ಶಾಲೆಯ ಬಳಿ ಮುಂದೆ ಯಾವುದೇ ಪ್ರದರ್ಶನಗಳಿಗೆ ಅವಕಾಶ ನೀಡದಿರಲು ಹಾಗೂ ಪರಿಸ್ಥಿತಿಯನ್ನು ಹತೋಟಿಯಲ್ಲಿಡಲು ಉನ್ನತ ಅಧಿಕಾರಿಗಳು ಪೋಲೀಸ್ ಕಮಿಷನರ್‌ರವರಿಗೆ ಸೂಚನೆ ನೀಡಿದ್ದಾರೆಂದು ವಿಶ್ವಾಸನೀಯವಾಗಿ ತಿಳಿದು ಬಂದಿದೆ. ನಿನ್ನೆಯ ದಿನ ಕಾನೂನು ಮತ್ತು ವ್ಯವಸ್ಥೆಯ ಡಿ.ಐ.ಜಿ.ಯವರು ಶಾಲೆಗೆ ಭೇಟಿ ನೀಡಿ ಪ್ರದರ್ಶನದಲ್ಲಿ ಭಾಗವಹಿಸಿದವರ ವಿಳಾಸಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಮತ್ತೊಂದು ಕಡೆ ಸರ್ಕಾರದ ಉನ್ನತ ಅಧಿಕಾರಿಗಳು ಎಂ.ಇ.ಎಸ್. ಕಾಲೇಜಿನ ಅಧಿಕಾರಿಗಳನ್ನು ಸಂಪರ್ಕಿಸಿ ಶ್ರೀ ರಾಘವ ಮತ್ತಿತರ ಪ್ರಾಧ್ಯಾಪಕರ ಮೇಲೆ ಕಣ್ಣಿಡಲಾಗಿದೆ. ಇದು ಶ್ರೀಮತಿ ರಾಘವ ಅವರನ್ನು ಮತ್ತಷ್ಟು ಅಸ್ವಸ್ಥಗೊಳಿಸಿದೆ. ಎಂ.ಇ.ಎಸ್.ನ ಆಡಳಿತಾಧಿಕಾರಿಗಳು ಅಲ್ಲಿಯ ವ್ಯವಸ್ಥೆಯಲ್ಲಿಯೂ ಶ್ರೀ ರಾಘವರ ನಕಾರಾತ್ಮಕ ವರ್ತನೆಯ ಚಿತ್ರವನ್ನು ನೀಡಿದ್ದಾರೆ.

ಕಾರ್ಯದರ್ಶಿಯವರ ಹೆಂಡತಿ ಪೋಲೀಸರ ಬಳಿ ಹೋಗಿದ್ದಾರೆಂದೂ, ಈಗಾಗಲೇ ಸೂಚನೆ ಬಂದಿರುವುದರಿಂದ ಯಾವುದೇ ಅಹಿತಕರ ಘಟನೆಗಳು ಶಾಲೆಯ ಆವರಣದ ಬಳಿಯಾಗಲೀ ಅಥವಾ ಅವರ ಪತಿಯ ವಿರುದ್ಧವಾಗಲಿ ನಡೆಯುವುದಕ್ಕೆ ಅವಕಾಶ ನೀಡುವುದಿಲ್ಲವೆಂದು ಪೋಲೀಸರು ಭರವಸೆ ನೀಡಿದ್ದಾರೆಂದೂ ತಿಳಿದು ಬಂದಿದೆ.

ಶೇಕಡ 90 ಕ್ಕೂ ಹೆಚ್ಚು ಪೋಷಕರು ಕಂತಿನಲ್ಲಾಗಲೀ, ಒಂದೇ ಗಂಟಿನಲ್ಲಾಗಲೀ ಡೊನೇಷನ್ ಕೊಡಬೇಕೆಂದು ನಿರ್ಣಯ ಮಾಡಿದ್ದಾರೆ. ಕಾಂಗ್ರೆಸ್ (ಐ) ಮುಖಂಡರು ಹಾಗೂ ಇತರರ ಬೆಂಬಲದಿಂದ ಸಹಿ ಸಂಗ್ರಹ ಪ್ರಚಾರವನ್ನು ತುಂಬಾ ಜೋರಿನಿಂದ ಪ್ರಾರಂಭಿಸಿದ್ದು ನಿಮ್ಮ ಪ್ರತಿಭಟನೆಯನ್ನು ಖಂಡಿಸುವ ಮನವಿಯನ್ನು ಮುಖ್ಯ ಮಂತ್ರಿಗಳಿಗೆ ಸಲ್ಲಿಸಲಾಗುವುದು.

ಈ ಬೆಳವಣಿಗೆಗಳ ಬೆಳಕಿನಲ್ಲಿ ಶ್ರೀಮತಿ ರಾಘವನ್‌ರವರ ಹಿತದೃಷ್ಟಿಯಿಂದ ನೀವು ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ಖಜಾಂಚಿಯವರನ್ನು ಬಂದು ಭೇಟಿ ಮಾಡಿ ವಿಷಯವನ್ನು ಚರ್ಚೆ ಮಾಡಿ ಸಂಪೂರ್ಣ ಸಾಮರಸ್ಯವನ್ನು ತರಬೇಕೆಂದು ನಾನು ವಿನಂತಿಸುತ್ತೇನೆ. ಜನಗಳಿಗೆ ವಿದ್ಯಾಭ್ಯಾಸ ಕೊಡಿಸುವ ದೃಷ್ಟಿಯಿಂದ ನನ್ನ ಈ ವಿನಂತಿಯನ್ನು ನೀವು ಗಂಭೀರವಾಗಿ ಪರಿಗಣಿಸುತ್ತೀರೆಂದು ಭಾವಿಸುತ್ತೇನೆ.

ವಂದನೆಗಳೊಂದಿಗೆ,

ನಿಮ್ಮ ವಿಶ್ವಾಸಿ
(ಸಹಿ) ಲೀಲಾರಾವ್

o

ನೂತನ ಪದಾಧಿಕಾರಿಗಳ ಆಯ್ಕೆ

ಕೋಲಾರ ಜಿಲ್ಲೆ, ಚಿಂತಾಮಣಿ ತಾಲ್ಲೂಕು ಎ.ಐ.ವೈ.ಎಫ್. ಶಾಖೆ ತಾ. 10-2-80ರಂದು ಕಾರ್ಯಾಲಯದಲ್ಲಿ ಸಭೆ ಸೇರಿ ನೂತನ ಪದಾಧಿಕಾರಿಗಳನ್ನು ಹಾಗೂ ಸಮಿತಿಯ ಸದಸ್ಯರನ್ನು ಆಯ್ಕೆ ಮಾಡಿತು. ವಿವರ ಈ ಕೆಳಗಿನಂತೆ ಇದೆ:

ಅಧ್ಯಕ್ಷ : ವಿಶ್ವನಾಥ್
ಉಪಾಧ್ಯಕ್ಷ: ಟಿ. ಜಿ. ಜಯಪ್ರತಾಪ ರೆಡ್ಡಿ
ಕಾರ್ಯದರ್ಶಿ : ಹರೀಂದ್ರ
ಸಹಕಾರ್ಯದರ್ಶಿ: ಜಿ.ವಿ.ಸುಬ್ಬಾರೆಡ್ಡಿ
ಖಜಾಂಚಿ : ಜಿ.ಸಿ.ಬಯ್ಯಾರೆಡ್ಡಿ

ಕಾರ್ಯಕಾರಿ ಸಮಿತಿ ಸದಸ್ಯರು :

ವಿಜಯ ಕುಮಾರ್, ವಿ. ನಾರಾಯಣಸ್ವಾಮಿ, ಸಿ. ಮದನ್‌ಮೋಹನ ರೆಡ್ಡಿ, ಎಸ್. ರಾಮಕೃಷ್ಣ, ಟಿ. ಜಿ. ರಘುನಾಥರೆಡ್ಡಿ, ಜಿ. ವೆಂಕಟರಮಣ ಮತ್ತು ಹೆಚ್. ನಾರಾಯಣರೆಡ್ಡಿ.

o

ಬೇಲೂರಿನಲ್ಲಿ ಯಶಸ್ವಿ ಹೋರಾಟ

ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನಲ್ಲಿರುವ ಮೀನಾ ಎಸ್ಟೇಟ್ ಕಾರ್ಮಿಕರು ವೇತನ ಹೆಚ್ಚಳ, ಮತ್ತು ಕಾನೂನಿನಲ್ಲಿರುವ ಇತರ ಸವಲತ್ತುಗಳನ್ನು ಪಡೆಯಲು ತಾ|| 12-1-80 ರಿಂದ ನಡೆಸುತ್ತಿದ್ದ ಮುಷ್ಕರ ತಾ|| 12-2-1980ರಂದು ಹಾಸನದ ಲೇಬರ್ ಆಫೀಸರ್‌ರವರ ಮುಂದೆ ಆಡಳಿತವರ್ಗ ಮತ್ತು ನಮ್ಮ ಸಂಘಗಳ ನಡುವೆ ಒಪ್ಪಂದವಾಗುವ ಮೂಲಕ ಯಶಸ್ವಿಯಾಯಿತು.

ಕಾರ್ಮಿಕರ ಮುಷ್ಕರವನ್ನು ಮುರಿಯಲು ಆಡಳಿತ ಮಂಡಳಿಯವರು ನಡೆಸಿದ ಎಲ್ಲಾ ಪಿತೂರಿಗಳನ್ನು ಕಾರ್ಮಿಕರು ಏಕಮನಸ್ಸಿನಿಂದ ಯಶಸ್ವಿಯಾಗಿ ಹಿಮ್ಮೆಟ್ಟಿಸಿದರು. ಮಾಲೀಕರಿಗೆ ಸಹಾಯಕರಾದ ಪೋಲೀಸ್ ಅಧಿಕಾರಿಗಳ ಬೆದರಿಕೆಗಳು ಕಾರ್ಮಿಕರನ್ನು ಹೋರಾಟ ಪಥದಿಂದ ವಿಮುಖಗೊಳಿಸಲು ವಿಫಲವಾದವು.

ಸಂಘದಿಂದ ಇತ್ತೀಚೆಗೆ ತಿರಸ್ಕರಿಸಲ್ಪಟ್ಟ ಕೆಲವು ಛಿದ್ರಕಾರೀ ಶಕ್ತಿಗಳು ಕರಿಗಾಲುಗಳನ್ನು ಒದಗಿಸಿಕೊಡುವ ಮೂಲಕ ಮುಷ್ಕರವನ್ನು ಮುರಿಯಲು ಆಡಳಿತ ಮಂಡಳಿಯವರಿಗೆ ಉತ್ತೇಜನ ನೀಡಿದ್ದರು.

ಇಷ್ಟು ಪ್ರತಿಕೂಲ ಪರಿಸ್ಥಿತಿಯನ್ನೆದುರಿಸಿಯೂ ಸವರಿ ಕಾರ್ಮಿಕರು ಸಿ.ಐ.ಟಿ.ಯು. ನೇತೃತ್ವದ ಮೇಲೆ ನಂಬಿಕೆಯನ್ನಿಟ್ಟು 32 ದಿನಗಳ ದೀರ್ಘಕಾಲದ ಮುಷ್ಕರ ನಡೆಸಿದ್ದರಿಂದ ಬೇಡಿಕೆಗಳು ಈಡೇರಲು ಸಾಧ್ಯವಾಯಿತು.

ಹೋರಾಟನಿರತ ಕಾರ್ಮಿಕರಿಗೆ ಧನ ಸಹಾಯ ನೀಡಿದ ಬೇದನೆ'ಸಿ' ಬ್ಲಾಕ್, ಕೊಲಾಸೋ ಮಲಸಾಗರ, ವಿಜಯ ಎಸ್ಟೇಟ್, ಒಸ್ನೂರು, ವಿಶಾಲಾಕ್ಷಿ, ಕೌ.ಕ.ಡಿ, ಬೇದನೆ 'ಎ'ಬ್ಲಾಕ್, ಮತ್ತು ದೈತಾಪುರ ತೋಟಗಳ ಕಾರ್ಮಿಕರನ್ನು ಮತ್ತು ಬೇರೆ ರೀತಿಯ ನೆರವನ್ನು ನೀಡಿದ ಸುತ್ತಮುತ್ತಲಿನ ಕಾರ್ಮಿಕರನ್ನು ಈ ಮೂಲಕ ಅಭಿನಂದಿಸುವುದಾಗಿ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ವಿ. ಸುಕುಮಾರ್ ತಿಳಿಸಿದ್ದಾರೆ.

●

ತುಮಕೂರಿನಲ್ಲಿ ಬೀಡಿಕಾರ್ಮಿಕರಿಗಾಗಿ ಆಸ್ಪತ್ರೆ

ಕೇಂದ್ರ ಸರಕಾರ ಹೊಸ ಸೊಪ್ಪಿನ ಮೇಲೆ ವಿಧಿಸಿದ್ದ ಕಲ್ಯಾಣ ನಿಧಿಯಿಂದ ಬೀಡಿ ಕಾರ್ಮಿಕರಿಗಾಗಿ ತುಮಕೂರಿನ ಗಾಂಧಿನಗರದಲ್ಲಿ ದಿ. 15-2-80ರಂದು ಆಸ್ಪತ್ರೆಯೊಂದನ್ನು ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್ನಿನ ಉಪಾಧ್ಯಕ್ಷರಾದ ಕಾಂ. ಕೆ ಆರ್. ನಾಯರ್‌ರವರಿಂದ ಉದ್ಘಾಟನೆ ಮಾಡಲಾಯಿತು. ತುಮಕೂರು ಜಿಲ್ಲಾ ಬೀಡಿಕಾರ್ಮಿಕರ ಸಂಘದ ಕಾರ್ಯದರ್ಶಿಗಳಾದ ಕಾಂ. ದಸ್ತಗೀರ್, ಅಧ್ಯಕ್ಷರಾದ ಕಾಂ ಚಿನ್ನಪ್ಪ, ಕುಣಿಗಲ್ ಬೀಡಿ ಕಾರ್ಮಿಕರ ಸಂಘದ ಉಪಾಧ್ಯಕ್ಷರಾದ ಕಾಂ. ಯೂನಸ್ ಖಾನ್, ಕಾರ್ಯದರ್ಶಿಗಳಾದ ಕಾಂ. ಬಡೇಸಾಹೇಬ್‌ರವರು ಮತ್ತು ಕಾಂ. ಟಿ ಎಲ್. ತಿಮ್ಮಪ್ಪನವರು ಇತರೆ ಬೀಡಿ ಕಾರ್ಮಿಕ ಮುಖಂಡರುಗಳು ಉದ್ಘಾಟನಾ ಸಮಾರಂಭದಲ್ಲಿ ಹಾಜರಿದ್ದರು.

ಬೀಡಿ ಕಾರ್ಮಿಕರಿಗಾಗಿಯೇ ತೆರೆಯಲ್ಪಟ್ಟಿರುವ ಈ ಆಸ್ಪತ್ರೆಯು ವಾರದಲ್ಲಿ ಶಿವಪುದಿನಸಿರಾ ಮತ್ತು ಕುಣಿಗಲ್‌ನಲ್ಲಿ ಕೆಲಸ ಮಾಡಿ ಕಾರ್ಮಿಕರಿಗೆ ಚಿಕಿತ್ಸೆ ನೀಡಲಾಗುವುದು. ಮತ್ತು ತುಮಕೂರಿನ ಕ್ಷಯದ ಆಸ್ಪತ್ರೆಯಲ್ಲಿ ಕೆಲವು ಹಾಸಿಗೆಗಳನ್ನು ಬೀಡಿ ಕಾರ್ಮಿಕರಿಗಾಗಿ ಮೀಸಲಾಗಿಡಲು ವ್ಯವಸ್ಥೆ ಮಾಡಲಾಗಿದೆ. ಎಲ್ಲಾ ಖಾಯಿಲೆಗಳಿಗೂ ಉಚಿತವಾಗಿ ಚಿಕಿತ್ಸೆ ಕೊಡುವುದರ ಜೊತೆಗೆ ಔಷಧಿ ಮತ್ತು ಚುಚ್ಚುಮದ್ದುಗಳನ್ನು ಪುಕ್ಕಟೆಯಾಗಿ ಕೊಡಲಾಗುತ್ತದೆ.

ತುಮಕೂರು ಜಿಲ್ಲಾ ಬೀಡಿ ಕೆಲಸಗಾರರ ಸಂಘವು ಕೇಂದ್ರ ಸರಕಾರದ ಈ ಯೋಜನೆಯನ್ನು ತುಮಕೂರು ಜಿಲ್ಲೆಗೆ ತರಲು ಅನೇಕ ವರ್ಷಗಳಿಂದ ಹೋರಾಟಮಾಡಿದ್ದರ ಪ್ರತಿಫಲವಾಗಿ ಆಸ್ಪತ್ರೆ ಪ್ರಾರಂಭವಾಗಿದೆ.

●

1980ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ (ಐ) ಪಕ್ಷವು ದೇಶದ ಒಟ್ಟು ಮತದಾರರ ಶೇ. 25ಕ್ಕಿಂತಲೂ ಮತ್ತು ಒಟ್ಟು ಮತ ಹಾಕಿದವರ ಶೇ. 50ಕ್ಕಿಂತಲೂ ಕಡಿಮೆ ಬೆಂಬಲಗಳಿಸಿದ್ದರೂ, ಶೇ.66ರಷ್ಟು ಲೋಕಸಭೆಯ ಸ್ಥಾನಗಳನ್ನು ಗಳಿಸಿ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವಂತಾಯಿತು. ಕಾಂಗ್ರೆಸ್ (ಐ) ಕಳೆದ ಚುನಾವಣೆಯಲ್ಲಿ 'ಸಮಾಜವಾದ', 'ಬಡತನ ನಿರ್ಮೂಲನ', ಇತ್ಯಾದಿ ಘೋಷಣೆಗಳಿಗಿಂತ 'ಭದ್ರ ಸರಕಾರ' ನೀಡುವ ಮತ್ತು 'ಕಾನೂನು ಹಾಗೂ ಶಿಸ್ತು' ಪಾಲಿಸುವ, ಅಂದರೆ ಯಥಾಸ್ಥಿತಿಯನ್ನು ಮುಂದುವರಿಸಿಕೊಂಡು ಹೋಗುವ ಆಶ್ವಾಸನೆಗಳಿಗೇ ಹೆಚ್ಚು ಮಹತ್ವಕೊಟ್ಟಿತ್ತು. ಅಧಿಕಾರಕ್ಕೆ ಬಂದ ಮೊದಲ ಕೆಲವು ದಿನಗಳಲ್ಲಿ ಪ್ರಧಾನಿ ಇಂದಿರಾಗಾಂಧಿ ತಮ್ಮ ಸರಕಾರ ತುರ್ತುಪರಿಸ್ಥಿತಿಯ ಕರಾಳ ಕ್ರಮಗಳನ್ನು ಪುನಃ ಕೈಗೊಳ್ಳುವುದಿಲ್ಲವೆಂದೂ, ಮುಯ್ಯಿಗೆ ಮುಯ್ಯಿ ತೀರಿಸುವುದಿಲ್ಲವೆಂದೂ, ರಾಷ್ಟ್ರೀಯ ಮೈತ್ರಿ ಭಾವನೆಯನ್ನು ತಾಳುವುದೆಂದೂ ಭರವಸೆಯನ್ನಿತ್ತರು. ಆದರೆ, ಇಂದಿರಾಗಾಂಧಿಯ 'ಭದ್ರಸರಕಾರ' ಅಧಿಕಾರಕ್ಕೆ ಬಂದ ಒಂದು ತಿಂಗಳಲ್ಲಿಯೇ ತನ್ನ ಸರ್ವಾಧಿಕಾರಿ ಪ್ರವೃತ್ತಿಯನ್ನು ಪ್ರಕಟಗೊಳಿಸಿತು.

ಮೇರೆಗೆ ಮಾಜಿ ರಕ್ಷಣಾ ಮಂತ್ರಿ ಹಾಗೂ ತುರ್ತುಪರಿಸ್ಥಿತಿಯಲ್ಲಿ ದುಷ್ಟಕೂಟಕ್ಕೆ ಸೇರಿದ ಬನ್ಸಿಲಾಲ್‌ರ ವಿರುದ್ಧವಿರುವ ಕ್ರಿಮಿನಲ್ ಮೊಕದ್ದಮೆಗಳನ್ನು ಒಂದೊಂದಾಗಿ ಹಿಂತೆಗೆದುಕೊಳ್ಳುತ್ತಿರುವುದು ತಿಳಿದುಬಂದಿದೆ. ಗುಂಡೂರಾವ್ ತನ್ನ ಅಧಿಕಾರವನ್ನು ಭದ್ರಗೊಳಿಸಲು ಜನರ ಗಮನವನ್ನು ಸಾಮಾಜಿಕ-ಆರ್ಥಿಕ ಸಮಸ್ಯೆಗಳ ಪರಿಹಾರಕಾರ್ಯಗಳಿಂದ ವಿಮುಖಗೊಳಿಸುತ್ತಿದ್ದಾರೆ. ಅದರಲ್ಲಿ ಕರ್ನಾಟಕ-ಕೇರಳ ಮತ್ತು ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದಗಳ ಬಗ್ಗೆ ಪ್ರಾದೇಶಿಕ ಸಂಕುಚಿತ ಭಾವನೆಗಳನ್ನು ಪ್ರಚೋದಿಸುತ್ತಿದ್ದಾರೆ. ಅರಸು ಸರಕಾರದ ಮಾಜಿ ಕಾನೂನು ಮಂತ್ರಿ ಎಲ್. ಜಿ. ಹಾವನೂರ್ ಅವರ ವಿರುದ್ಧ ಒಮ್ಮೆ ಇತ್ಯರ್ಥಗೊಂಡ ಕೋರ್ಟಿನಿಂದನೆಯ ಮೊಕದ್ದಮೆಯನ್ನು ಮರು ವಿಚಾರಣೆಗೆ ಗುರಿಮಾಡಲಾಗಿದೆ. ಇದರಿಂದ ರಾಜಕೀಯ ಪ್ರತೀಕಾರಗಳು ಪುನಃ ಆರಂಭವಾದಂತಾಗಿದೆ.

ವಿಧಾನಸಭೆಗಳ ವಿಸರ್ಜನೆಗೆ ತಯಾರಿ :

ಪ. ಬಂಗಾಳ ಮತ್ತು ತ್ರಿಪುರಾ

ಮತ್ತು ಬಿಹಾರ ರಾಜ್ಯಗಳಲ್ಲಿ ಕಾನೂನು ಶಿಸ್ತು ಮುರಿದು ಬಿದ್ದಿದೆ ಎಂಬ ನೆಪ. ಉ ಪ್ರದೇಶದಲ್ಲಿ ನಾರಾಯಣಪುರದಲ್ಲಿ ಗ್ರಾಮೀಣ ಬಡಜನರ ಮೇಲೆ ಇತ್ತೀಚೆಗೆ ಪೋಲೀಸರಿಂದ ನಡೆದ ಅಮಾನುಷ ಅತ್ಯಾಚಾರಗಳನ್ನು ದುರುಪಯೋಗಿಸಿಕೊಂಡು ಅಲ್ಲಿನ ಸರಕಾರ ಉರುಳಿಸುವ ಪ್ರಯತ್ನ ನಡೆಯುತ್ತಿದೆ. ಬಿಹಾರ್‌ನಲ್ಲಿ ಹರಿಜನರ ಮೇಲೆ ಇತ್ತೀಚೆಗೆ ಪಾರಸ್ ಬಿಘೂದಲ್ಲಿ ನಡೆದಿರುವ ಧಾಳಿ ದಬ್ಬಾಳಿಕೆಗಳು ರಾಜಕೀಯ ದುರುದ್ದೇಶ ಉಳ್ಳವುಗಳೆಂದು ಸಂಶಯ ಬರುತ್ತಿದೆ. ಮಧ್ಯ ಪ್ರದೇಶದಲ್ಲಿ ಬರಗಾಲ ಪರಿಹಾರ ನಿಧಿಯನ್ನು ದುರುಪಯೋಗಿಸಲಾಗುತ್ತಿದೆ ಎಂಬ ಅಪವಾದ. ಈ ರಾಜ್ಯದಲ್ಲಿಯೂ ರಾಜಸ್ಥಾನದಲ್ಲಿಯೂ ಕಾಂಗ್ರೆಸ್(ಐ) ಲೋಕಸಭಾ ಚುನಾವಣೆಯಲ್ಲಿ ಅಭೂತಪೂರ್ವ ಜಯಗಳಿಸಿರುವುದರಿಂದ ರಾಜ್ಯ ಸರಕಾರಗಳು ಅಧಿಕಾರದಲ್ಲಿ ಮುಂದುವರಿಯಬಾರದೆಂದೂ ಒಂದು ವಾದ. ಸಂಜಯ ಗಾಂಧಿಯ ಯುವ ಕಾಂಗ್ರೆಸ್ ಕಾಂಗ್ರೆಸ್ (ಐ) ಹೊರತಾದ ಎಲ್ಲಾ ವಿಧಾನಸಭೆಗಳನ್ನೂ ವಿಸರ್ಜಿಸಿ ಮರು ಚುನಾವಣೆ ನಡೆಸಲು ರಾಷ್ಟ್ರಾದ್ಯಂತ ಚಳವಳಿ ಹೂಡುವ ಬೆದರಿಕೆ ಹಾಕಿದೆ. ಇಂದಿರಾಗಾಂಧಿ ನಾರಾಯಣಪುರಕ್ಕೆ ಭೇಟಿಕೊಟ್ಟು ಅಲ್ಲಿನ ಘಟನೆಗೆ

ಸ್ಥಾಪಿಸುವುದು ಮತ್ತು ವಿರೋಧ ಪಕ್ಷಗಳ ಬಲ ಅಡಗಿಸುವುದು ಇವೇ ಅವರ ಸಧ್ಯದ ಮುಖ್ಯ ಉದ್ದೇಶಗಳು. ಕಾಂಗ್ರೆಸ್ (ಐ)ಗೆ ರಾಜ್ಯಸಭೆಯ ಒಟ್ಟು 232 ಸದಸ್ಯರಲ್ಲಿ ನಿಚ್ಚಳ ಬಹುಮತ ದೊರಕಲು 117 ಸದಸ್ಯರ ಬೆಂಬಲ ಬೇಕಾಗಿದೆ ಈಗ ಅದಕ್ಕೆ 87 ಸದಸ್ಯರಿದ್ದಾರೆ(ಪಕ್ಷಾಂತರಿಗಳೂ ಸೇರಿ) ರಾಜ್ಯಸಭೆಯ 66 ಸದಸ್ಯರು, ಕಾಂಗ್ರೆಸ್ (ಐ)ನ 22ಸದಸ್ಯರೂ ಸೇರಿ ಸಧ್ಯದಲ್ಲಿಯೇ ನಿವೃತ್ತರಾಗಬೇಕಾಗಿದೆ. ಮಾರ್ಚ್ ಕೊನೆಯ ವಾರದಲ್ಲಿ ಮರು ಚುನಾವಣೆ ನಡೆಯಲಿದ್ದು, ಕಾಂಗ್ರೆಸ್ (ಐ) ರಾಜ್ಯಸಭೆಯಲ್ಲಿ ಬಹುಮತ ಪಡೆಯಲು ಒಟ್ಟು 52 ಸ್ಥಾನಗಳನ್ನಾದರೂ ಗಳಿಸಬೇಕಾಗಿದೆ. ಹೆಚ್ಚಿನ ರಾಜ್ಯಗಳಲ್ಲಿ ಕಾಂಗ್ರೆಸ್ (ಐ) ಹೊರತಾದ ಸರಕಾರಗಳಿರುವುದರಿಂದ ಇದು ಕಷ್ಟವಾಗಿದೆ. ರಾಜ್ಯಸಭೆಯಲ್ಲಿ ಬಹುಮತ ಇಲ್ಲದಿದ್ದರೆ ಮುಂದೆ ಕಾರ್ಮಿಕ ವಿರೋಧಿ ಮತ್ತು ಜನ ವಿರೋಧಿ ಮಸೂದೆಗಳನ್ನೂ ಸಂವಿಧಾನಕ್ಕೆ ತಿದ್ದುಪಡಿಗಳನ್ನೂ ಅಂಗೀಕರಿಸಲು ಅಸಾಧ್ಯವಾಗುವುದು. ಆದುದರಿಂದಲೇ, ಹೇಗಾದರೂ ಮಾಡಿ ಕೆಲವು ಮುಖ್ಯ ರಾಜ್ಯ ವಿಧಾನಸಭೆಗಳನ್ನಾದರೂ ಈ ತಿಂಗಳ 15ರ ಒಳಗಾಗಿ ವಿಸರ್ಜಿಸಿ ಮಾರ್ಚ್ 25ರ ಒಳಗಾಗಿ ಮರು

ಒರಿಸ್ಸಾ, ಪಂಜಾಬು ರಾಜ್ಯಗಳ ಮುಖ್ಯಮಂತ್ರಿಗಳು ರಾಜ್ಯ ವಿಧಾನಸಭೆಗಳ ವಿಸರ್ಜನೆಗೆ ತಮ್ಮ ಒಮ್ಮತದ ವಿರೋಧ ವ್ಯಕ್ತಪಡಿಸಿದ್ದು ಸಕಾಲಿಕ ಎಚ್ಚರಿಕೆಯಾಗಿದೆ. ಹಾಗೆಯೇ, ಮುಂಬರುವ ಐದು ಲೋಕಸಭಾ ಸ್ಥಾನಗಳಿಗೆ ನಡೆಯುವ ಉಪಚುನಾವಣೆಗಳಲ್ಲಿ ಕಾಂಗ್ರೆಸ್ (ಐ) ವಿರುದ್ಧ ಏಕೈಕ ಸಮಾನ ಅಭ್ಯರ್ಥಿ ಸ್ಪರ್ಧಿಸುವಂತೆ ವಿರೋಧ ಪಕ್ಷಗಳು ಪ್ರಯತ್ನಿಸುತ್ತಿರುವುದೂ ಸ್ವಾಗತ. (ಈಗಾಗಲೇ ಒಂಭತ್ತು ರಾಜ್ಯಗಳ ವಿಧಾನಸಭೆಗಳನ್ನು ವಿಸರ್ಜಿಸಲಾಗಿದ್ದು, ಏಕಪಕ್ಷೀಯ ಸರ್ವಾಧಿಕಾರವನ್ನು ಸ್ಥಾಪಿಸುವ ಇಂದಿರಾ ಕಾಂಗ್ರೆಸ್ ಯತ್ನವನ್ನು ಪ್ರಜಾಪ್ರಭುತ್ವ ಶಕ್ತಿಗಳು ಒಗ್ಗಟ್ಟಾಗಿ ಎದುರಿಸಬೇಕಾಗಿದೆ)

ಉಚ್ಚ ಅಧಿಕಾರಿಗಳ ಬದಲಾವಣೆ, ಪ್ರತೀಕಾರ :

ಇಂದಿರಾಗಾಂಧಿ ಅಧಿಕಾರಕ್ಕೆ ಬಂದಾಗಿನಿಂದ ಉಚ್ಚ ಅಧಿಕಾರಿಗಳ ನೇಮಕದಲ್ಲಿ ಭಾರೀ ಪ್ರಮಾಣದಲ್ಲಿ ಬದಲಾವಣೆಗಳು ನಡೆಯುತ್ತಿವೆ. ತುರ್ತು ಪರಿಸ್ಥಿತಿಯಲ್ಲಿ ಅತ್ಯಾಚಾರ ಅತಿರೇಕಗಳನ್ನು ನಡೆಸಿದ ಅನೇಕರನ್ನು ಪುನಃ ಉನ್ನತ ಅಧಿಕಾರಗಳಿಗೆ ನೇಮಿ

'ಭದ್ರಸರಕಾರ'ದ ಮುನ್ಸೂಚನೆಗಳು !

ಆರ್. ಚಂದ್ರ

ಪಕ್ಷಾಂತರಕ್ಕೆ ಪ್ರಚೋದನೆ :

ರಾಜ್ಯ ಸಭೆಯಲ್ಲಿ ಬಹುಮತವಿಲ್ಲದ ಮತ್ತು ಆಂಧ್ರ, ಮಣಿಪುರಗಳ ಹೊರತು ಇನ್ನಾವ ರಾಜ್ಯದಲ್ಲಿಯೂ ಅಧಿಕಾರದಲ್ಲಿಲ್ಲದ ಕಾಂಗ್ರೆಸ್ (ಐ) ಹಲವಾರು ಆಸೆ ಆಮಿಷಗಳನ್ನೊಡ್ಡಿ ಕಾಂಗ್ರೆಸ್ (ಯು), ಲೋಕದಳ, ಜನತಾ ಪಕ್ಷಗಳ ರಾಜ್ಯಸಭಾ ಸದಸ್ಯರೂ, ವಿಧಾನಸಭಾ ಸದಸ್ಯರೂ ತನ್ನ ಪಕ್ಷಕ್ಕೆ ಪಕ್ಷಾಂತರಿಸುವಂತೆ ಪ್ರತ್ಯಕ್ಷವಾಗಿ ಪ್ರಚೋದಿಸಲಾರಂಭಿಸಿತು. ಪರಿಣಾಮವಾಗಿ ಹರಿಯಾಣದಲ್ಲಿ ಜನತಾ ಪಕ್ಷದ ಮುಖ್ಯಮಂತ್ರಿ ಭಜನ್‌ಲಾಲ್ ತನ್ನ ಬೆಂಬಲಿಗರೊಂದಿಗೆ ಕಾಂಗ್ರೆಸ್ (ಐ)ಗೆ ಸೇರಿ ತನ್ನ ಮುಖ್ಯಮಂತ್ರಿ ಪದವಿ ಉಳಿಸಿಕೊಳ್ಳುವಂತಾಯಿತು. ಕರ್ನಾಟಕದಲ್ಲಿ ಕಾಂಗ್ರೆಸ್ (ಯು) ಸೋತ ಮೇಲೆ ದೇವರಾಜ ಅರಸ್ ತಮ್ಮ ಸರಕಾರದ ರಾಜಿನಾಮೆ ಸಲ್ಲಿಸಿದ ನಂತರ, ಪಕ್ಷಾಂತರಿಗಳ ಬೆಂಬಲದಿಂದಲೇ ಕಾಂಗ್ರೆಸ್(ಐ)ಯ ಗುಂಡೂರಾವ್ ಹೊಸ ಸರಕಾರ ರಚಿಸುವಂತಾಯಿತು. ಕಾಂಗ್ರೆಸ್ (ಐ) ಪಕ್ಷಾಂತರಿಗಳ ಬೆಂಬಲದಿಂದ ರಾಜ್ಯಸಭೆಯಲ್ಲಿಯೂ ತನ್ನ ಸ್ಥಾನಗಳನ್ನು ಹೆಚ್ಚಿಸಿಕೊಂಡಿದೆ.

ಭಜನ್‌ಲಾಲ್ ತನ್ನ ಅಧಿಕಾರವನ್ನು ಭದ್ರಗೊಳಿಸಲು ಕೇಂದ್ರದ ಕಾಂಗ್ರೆಸ್(ಐ) ಸರಕಾರದ ಪ್ರತ್ಯಕ್ಷ ಹಾಗೂ ಪರೋಕ್ಷವಾದ ಒತ್ತಾಯದ

ರಾಜ್ಯಗಳಂತೆ, ಕೇರಳದಲ್ಲಿಯೂ ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಪಕ್ಷದ ನೇತೃತ್ವದ ಎಡ ಹಾಗೂ ಪ್ರಜಾಪ್ರಭುತ್ವವಾದಿ ರಂಗವು ಪ್ರಚಂಡ ಬಹುಮತದಿಂದ 2/3ರಷ್ಟು ಸ್ಥಾನಗಳಿಸಿ ಅಧಿಕಾರಕ್ಕೆ ಬಂದಿರುವುದರಿಂದ ಉತ್ತರದ ರಾಜ್ಯಗಳಲ್ಲಿ ಜನತಾ ಮತ್ತು ಲೋಕದಳಗಳ ಸರಕಾರಗಳಿಗೆ ಸ್ವಲ್ಪ ಧೈರ್ಯ ಬಂದಂತಾಗಿದೆ. ಈ ರಾಜ್ಯಗಳಲ್ಲಿ ಹರಿಯಾಣ ಮತ್ತು ಕರ್ನಾಟಕ ಮಾದರಿಯಂತೆ ಪಕ್ಷಾಂತರಿಗಳ ಬೆಂಬಲದಿಂದ ಕಾಂಗ್ರೆಸ್ (ಐ) ತನ್ನ ಸರಕಾರಗಳನ್ನು ರಚಿಸಲು ಯಶಸ್ವಿಯಾಗಲಿಲ್ಲ. ಈ ಸೋಲಿಗೆ ಪ್ರತೀಕಾರವೆಂಬಂತೆ ಉತ್ತರದ ರಾಜ್ಯಗಳ ವಿಧಾನಸಭೆಗಳನ್ನು ವಿಸರ್ಜಿಸುವ ತಯಾರಿ ಭರದಿಂದ ಸಾಗುತ್ತಿದೆ.

'ರಾಜ್ಯ ವಿಧಾನಸಭೆಗಳನ್ನು ಸಧ್ಯವೇ ವಿಸರ್ಜಿಸಲಾಗುವದು, ಅಷ್ಟರಲ್ಲಿಯೇ ನಮ್ಮ ಪಕ್ಷಕ್ಕೆ ಸೇರಿ, ಇಲ್ಲವಾದರೆ ಮುಂಬರುವ ವಿಧಾನಸಭಾ ಚುನಾವಣೆಗಳಲ್ಲಿ ಪ್ರವೇಶ ಪತ್ರ ಸಿಗಲಾರದು' ಎಂದು ಕಾಂಗ್ರೆಸ್(ಐ) ವರಿಷ್ಠ ನಾಯಕರೂ ಕೇಂದ್ರ ಮಂತ್ರಿಗಳೂ ಪಕ್ಷಾಂತರಕ್ಕೆ ಮುಕ್ತವಾಗಿ ಪ್ರಚೋದಿಸುತ್ತಾ, ಕಾಂಗ್ರೆಸ್(ಐ) ಹೊರತಾದ ಎಲ್ಲಾ ರಾಜ್ಯಗಳಿಗೆ ಎಚ್ಚರಿಕೆ ಕೊಡುತ್ತಿದ್ದಾರೆ. ವಿಧಾನಸಭೆಗಳ ವಿಸರ್ಜನೆಗೆ ಒಂದಲ್ಲ ಒಂದು ನೆಪವನ್ನು ಹುಡುಕಲಾಗುತ್ತಿದೆ. ಉ. ಪ್ರದೇಶ

ಇನ್ನಷ್ಟು ಮಹತ್ವವಿತ್ತಂತಾಗಿದೆ, ರಾಜ್ಯ ವಿಧಾನಸಭೆಯನ್ನು ವಿಸರ್ಜಿಸುವ ಮುನ್ಸೂಚನೆಯೂ ಆಗಿದೆ.

ಮೂವತ್ತು ವರ್ಷಗಳ ಕಾಂಗ್ರೆಸ್ ಆಡಳಿತಾವಧಿಯಲ್ಲಿ, ಅದರಲ್ಲೂ ಹನ್ನೊಂದು ವರ್ಷಗಳ ಇಂದಿರಾಗಾಂಧಿಯ ಆಡಳಿತಾವಧಿಯಲ್ಲಿ ಭ್ರಷ್ಟಾಚಾರ, ಹರಿಜನ - ಗಿರಿಜನರ ಮತ್ತು ಅಲ್ಪ ಮತೀಯರ ಮೇಲೆ ಅತ್ಯಾಚಾರ ಮತ್ತು ದಬ್ಬಾಳಿಕೆ, ಇತ್ಯಾದಿಗಳಿರಲಿಲ್ಲವೆ? ಈಗ ಕಾಂಗ್ರೆಸ್ (ಐ)ಯ ಸರಕಾರವಿರುವ ಆಂಧ್ರ ಪ್ರದೇಶದಲ್ಲಿ ಇವುಗಳು ನಡೆಯುತ್ತಿಲ್ಲವೆ? ಇಂದಿರಾಗಾಂಧಿ ಅಸ್ಸಾಂನಲ್ಲಿ ಅಕ್ಟೋಬರದಿಂದ ಮತದಾರರ ಪಟ್ಟಿಯಿಂದ ವಿದೇಶಿಯರನ್ನು ತೆಗೆದು ಹಾಕಲು ನಡೆಸುತ್ತಿರುವ ಚಳವಳಿವನ್ನು ಕೊನೆಗಾಣಿಸಲು ಆ ರಾಜ್ಯಕ್ಕೆ ಇನ್ನೂ ಯಾಕೆ ಭೇಟಿ ನೀಡಲಿಲ್ಲ? ನಾರಾಯಣಪುರಕ್ಕೆ ಮಾತ್ರ ಯಾಕೆ ಅವರು ಭೇಟಿ ನೀಡಿದರು? ವಿಷಯ ಸ್ಪಷ್ಟವಾಗಿದೆ.

ಕಾಂಗ್ರೆಸ್ (ಐ) ಪಕ್ಷವಾಗಲೀ ಇಂದಿರಾಗಾಂಧಿ - ಸಂಜಯಗಾಂಧಿಯಾಗಲೀ ಹರಿಜನರ, ಗಿರಿಜನರ, ಅಲ್ಪ ಮತೀಯರ ಬಗ್ಗೆ, ಕಾನೂನು ಶಿಸ್ತುಗಳ ಬಗ್ಗೆ, ಭ್ರಷ್ಟಾಚಾರಗಳ ಬಗ್ಗೆ ಕೇವಲ ಮೊಸಳೆ ಕಣ್ಣೀರು ಸುರಿಸುತ್ತಿರುವುದು. ಹೇಗಾದರೂ ಮಾಡಿ ರಾಜ್ಯಸಭೆಯಲ್ಲಿ ಬಹುಮತಗಳಿಸುವುದು, ರಾಜ್ಯಗಳಲ್ಲಿ ತಮ್ಮ ಸರಕಾರ

ಚುನಾವಣೆ ನಡೆಸುವ ತಯಾರಿ ಭರದಿಂದ ನಡೆಯುತ್ತಿದೆ.

ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಪಕ್ಷವೇ ರಾಜ್ಯಗಳಲ್ಲಿಯೂ ಅಧಿಕಾರಕ್ಕೆ ಬರಬೇಕೆಂಬ ವಾದವೊಡ್ಡಿ, ಒಂದಲ್ಲ ಒಂದು ಕಾರಣದಿಂದ ರಾಜ್ಯ ಸರಕಾರಗಳನ್ನು ವಜಾ ಮಾಡುವುದು, ವಿಧಾನ ಸಭೆಗಳನ್ನು ವಿಸರ್ಜಿಸುವುದು ಪ್ರಜಾಪ್ರಭುತ್ವದ ಹಾಗೂ ಸಂವಿಧಾನದಲ್ಲಿ ನಿರೂಪಿಸಿದ ಒಕ್ಕೂಟದ ತತ್ವಗಳಿಗೆ ವಿರುದ್ಧವಾಗಿದೆ. ಅಂತಹ ಕ್ರಮವು ಏಕ ಪಕ್ಷದ ಸರ್ವಾಧಿಕಾರವನ್ನು ಹೇರುವ ಪ್ರಯತ್ನವಾಗಿದೆ. ರಾಜ್ಯಗಳಲ್ಲಿ ಅರಾಜಕತೆ, ಭ್ರಷ್ಟಾಚಾರ, ಪೋಲೀಸು ದಬ್ಬಾಳಿಕೆ, ದುರ್ಬಲ ವರ್ಗದ ಮತ್ತು ಅಲ್ಪ ಮತೀಯರ ಮೇಲಿನ ಅತ್ಯಾಚಾರ, ಇತ್ಯಾದಿಗಳ ವಿರುದ್ಧ ಪ್ರಜಾಪ್ರಭುತ್ವವಾದಿ ಶಕ್ತಿಗಳು ಹೋರಾಟ ಮಾಡುವಂತೆಯೇ, ಅಲ್ಲಿನ ಸರಕಾರಗಳನ್ನು ಕೇಂದ್ರವು ಹಸ್ತಕ್ಷೇಪಮಾಡಿ ಉರುಳಿಸುವುದನ್ನೂ ಪ್ರಬಲವಾಗಿ ವಿರೋಧಿಸಬೇಕು. ಈ ನಿಟ್ಟಿನಲ್ಲಿ ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳು ಬಹುಮತದಿಂದ ಕಾಂಗ್ರೆಸ್ (ಐ) ಹೊರತಾದ ರಾಜ್ಯ ವಿಧಾನ ಸಭೆಗಳ ವಿಸರ್ಜನೆಯ ವಿರುದ್ಧ ರಾಷ್ಟ್ರಪತಿಯವರ ಭಾಷಣಕ್ಕೆ ಸರಕಾರದ ಕೃತಜ್ಞತಾ ಮಂಡನೆಗೆ ತಿದ್ದುಪಡಿ ತಂದದ್ದೂ, ನಂತರ ಕೇರಳ, ಪ. ಬಂಗಾಳ, ತ್ರಿಪುರ, ರಾಜಸ್ಥಾನ, ಉ. ಪ್ರದೇಶ, ಮ. ಪ್ರದೇಶ, ಬಿಹಾರ

ಸಲಾಗುತ್ತಿದೆ. ಅಂತಹ ಅತ್ಯಾಚಾರ ಮತ್ತು ಅತಿರೇಕಗಳಲ್ಲಿ ಅಪಾದಿತರ ವಿರುದ್ಧ ವಿಚಾರಣೆಗಳಲ್ಲಿ ತೊಡಗಿರುವ ಉನ್ನತ ಅಧಿಕಾರಿಗಳ ವಿರುದ್ಧ ಇಂದಿರಾ ಸರಕಾರ ತೀವ್ರ ಪ್ರತೀಕಾರ ಕ್ರಮ ಕೈಕೊಳ್ಳುತ್ತಿದೆ.

ತುರ್ತು ಪರಿಸ್ಥಿತಿಯಲ್ಲಿ ದೆಹಲಿ ಅಭಿವೃದ್ಧಿ ಮಂಡಳಿಯ ಉಪಾಧ್ಯಕ್ಷನಾಗಿದ್ದ ಮತ್ತು ತುರ್ಕ್‌ಮನ್‌ಗೇಟ್ ಪ್ರದೇಶದಲ್ಲಿ ನಗರ ಸೌಂದರ್ಯಕ್ಕಾಗಿ ಮನೆಗಳನ್ನು ಕೆಡವಿಹಾಕಲು ಕಾರಣನಾಗಿದ್ದ ಜಗಮೋಹನ್‌ರನ್ನು ಈಗ ದೆಹಲಿಯ ಲೆ। ಗವರ್ನರ್ ಆಗಿ ನೇಮಿಸಲಾಗಿದೆ.

"ಕಿಸ್ಸಾ ಕುರ್ಸಿಕಾ"ಹಗರಣದ ವಿಚಾರಣೆಯಲ್ಲಿ ಸಕ್ರಿಯವಾಗಿ ಪಾತ್ರವಹಿಸಿದ ಸಿ.ಬಿ.ಐ.ಯ ಡಿ.ಐ.ಜಿ. ಅಧಿಕಾರಿ ಎನ್.ಕೆ. ಸಿಂಗ್‌ಅವರನ್ನು ಅವರ ಮನೆಯಲ್ಲಿಯೇ ತಾ. 29 ಜನವರಿಯಂದು ಬೆಳಗಾಗುವುದರೊಳಗಾಗಿ ಹರಿಯಾಣ ಸಶಸ್ತ್ರ ಪೋಲೀಸರು ಮುನ್ಸೂಚನೆ ಇಲ್ಲದೆ, ಸಕಾರಣವಿಲ್ಲದೆ, ವಾರೆಂಟ್ ಕೊಡದಿಲ್ಲದೆ,ಸಿ.ಬಿ.ಐ.ಡೈರೆಕ್ಟರರ ಅನುಮತಿಯೂ ಇಲ್ಲದೆ ದಸ್ತಗಿರಿ ಮಾಡಿ ದೂರದ ಗುರ್‌ಗಾಂಗೆ ವಿಚಾರಣೆಗಾಗಿ ಕೊಂಡೊಯ್ದರು. ಸಿಂಗ್ ಅವರನ್ನು ರೂ.2000 ಬಾಂಡಿನ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ಈ ಕುರಿತು ಲೋಕಸಭೆಯಲ್ಲಿಯೂ

(6ನೇ ಪುಟ ನೋಡಿ)

ಬಂಡವಾಳಶಾಹಿ ಪದ್ಧತಿಯಲ್ಲಿ ನಿರುದ್ಯೋಗದ ಹೊಸ ವೈಶಿಷ್ಟ್ಯಗಳು

ಬಂಡವಾಳಶಾಹಿ ಸಮಾಜವನ್ನು ಪ್ರತೀ ಹಂತದಲ್ಲೂ ನಿರುದ್ಯೋಗ ಸಮಸ್ಯೆಯು ಸಹಜವಾಗಿಯೇ ಕಾಡುತ್ತದೆ. ಆರ್ಥಿಕಚಕ್ರದ ಪರಿಭ್ರಮಣೆಯು ಯಾವ ಹಂತದಲ್ಲೇ ಇರಲಿ, ದುಡಿಯಲು ಶಕ್ತರಿರುವ ನಿರುದ್ಯೋಗಿಗಳ ಒಂದು ದೊಡ್ಡ ಪಡೆಯು ಬಂಡವಾಳಶಾಹಿ ಉತ್ಪಾದನಾ ಕ್ರಮದ ಒಂದು ಅವಿಭಾಜ್ಯ ಅಂಗವಾಗಿರುತ್ತದೆ. ದುಡಿಯುವ ಜನರು ಅಧಿಕ ಸಂಖ್ಯೆಯಲ್ಲಿ ತಮಗೆ ನಿಜವಾಗಿ ಲಭಿಸಬೇಕಾದ ದುಡಿಮೆಯ ಹಕ್ಕಿನಿಂದ ವಂಚಿತರಾಗುವುದರಿಂದ ಮತ್ತು ನಿರುದ್ಯೋಗವು ಜನತೆಯ ಹೊಸ ಸ್ತರಗಳಿಗೆ ಮತ್ತು ವಿಭಾಗಗಳಿಗೆ ಪಸರಿಸುವುದರಿಂದ ಬಂಡವಾಳಶಾಹಿ ಸಮಾಜದ ಬೆಳವಣಿಗೆಯ ಜೊತೆಗೇ ನಿರುದ್ಯೋಗ ಪರಿಸ್ಥಿತಿಯೂ ಹೆಚ್ಚು ತೀವ್ರವಾಗುತ್ತದೆ. ದುಡಿಯುವ ಜನರ ಸತತ ಹೋರಾಟದ ಪರಿಣಾಮವಾಗಿ ಅನೇಕ ಬಂಡವಾಳಶಾಹಿ ರಾಷ್ಟ್ರಗಳ ಸಂವಿಧಾನಗಳು ದುಡಿಮೆಯ ಹಕ್ಕನ್ನು ಒಳಗೊಂಡಿದ್ದರೂ, ಇದನ್ನು ಆಚರಣೆಗೆ ತರುವಲ್ಲಿ ಬಂಡವಾಳಶಾಹಿ ಸಮಾಜವು ವಿಫಲಗೊಂಡಿದೆ. ನಿರುದ್ಯೋಗ ಪರಿಸ್ಥಿತಿಯು ಬಂಡವಾಳಶಾಹಿ ವ್ಯವಸ್ಥೆ ಮತ್ತು ಪ್ರತಿಯೊಂದು ಬಂಡವಾಳಶಾಹಿ ರಾಷ್ಟ್ರವೂ ಎದುರಿಸುತ್ತಿರುವ ಅತ್ಯಂತ ತೀವ್ರವಾದ ಸಾಮಾಜಿಕ ಸಮಸ್ಯೆಯಾಗಿದೆ.

ಅರುವತ್ತರ ದಶಕದಲ್ಲಿ ಬಂಡವಾಳಶಾಹಿ ರಾಷ್ಟ್ರಗಳ ದುಡಿಮೆಯ ಮಾರುಕಟ್ಟೆಯಲ್ಲಿ ರೂಪುಗೊಂಡ ಪರಿಸ್ಥಿತಿಯು ಕೆಲವು ವೈಶಿಷ್ಟ್ಯಗಳನ್ನು ಹೊಂದಿದ್ದು, ಅದು ಬಂಡವಾಳಶಾಹಿ ವ್ಯವಸ್ಥೆಯ ಸಾಮಾನ್ಯ ನಿರುದ್ಯೋಗ ಪರಿಸ್ಥಿತಿಗಿಂತ ತೀರಾ ಭಿನ್ನವಾಗಿತ್ತು. ಮೊದಲಾಗಿ, ಕಳೆದ ಮಹಾಯುದ್ಧಾನಂತರ ಅದು ಹಿಂದೆಂದೂ ಕಂಡಿರದ ಹಂತವನ್ನು ತಲುಪಿತ್ತು. ಎಪ್ಪತ್ತರ ದಶಕವಿಡೀ ನಿರುದ್ಯೋಗಿ ಜನರ ಸಂಖ್ಯೆ ಸತತವಾಗಿ ಏರುತ್ತಲೇ ಇತ್ತು. ಇತ್ತೀಚೆಗೆ ನಡೆದ O. E. C. D. (ಆರ್ಗನೈಸೇಶನ್ ಫಾರ್ ಇಕಾನಾಮಿಕ್ ಅಂಡ್ ಕಮರ್ಶಿಯಲ್ ಡೆವಲಪ್‌ಮೆಂಟ್) ಸಭೆಯು ಅದರ ಸದಸ್ಯರಾದ 24 ಬಂಡವಾಳಶಾಹಿ ದೇಶಗಳಲ್ಲಿ ನಿರುದ್ಯೋಗಿ ಜನರ ಸಂಖ್ಯೆಯು 18 ಮಿಲಿಯಕ್ಕೇರಿದೆ ಅಥವಾ ಇದು ಒಟ್ಟು ಕಾರ್ಮಿಕ ಶಕ್ತಿಯ ಶೇ. 5 25ರಷ್ಟಾಗಿದೆಯೆಂದು ಘೋಷಿಸಿತು. ಇದು ಯುದ್ಧಾನಂತರ 1974-75ರಲ್ಲಿ ಸಂಭವಿಸಿದ ಆರ್ಥಿಕ ಬಿಕ್ಕಟ್ಟಿಗಿಂತಲೂ ತೀವ್ರವಾಗಿದೆ.

ಆರಂಭದಲ್ಲಿ ಹಲವು ಬಂಡವಾಳಶಾಹಿ ಸಂಶೋಧಕರು ನಿರುದ್ಯೋಗ ಪರಿಸ್ಥಿತಿಯ ಬೆಳವಣಿಗೆಯನ್ನು, 1974-75ರ ಬಿಕ್ಕಟ್ಟಿನಲ್ಲಿ ವಿಶೇಷವಾಗಿ ಕಾಣಿಸಿಕೊಂಡ, ಆದರೆ ಸಾಮಾನ್ಯವಾಗಿ ಎಲ್ಲಾ ಬಿಕ್ಕಟ್ಟುಗಳಲ್ಲೂ ಕೈಗಾರಿಕಾ ಉತ್ಪಾದನೆಯು ಕುಸಿತಗೊಳ್ಳುವ ಆರ್ಥಿಕ ಚಕ್ರದ ಒಂದು ವೈಶಿಷ್ಟ್ಯವೆಂದು ಪರಿಗಣಿಸಲು ತೊಡಗಿದ್ದರು. ಆದರೆ ಈ ಬಿಕ್ಕಟ್ಟಿನ ಕೊನೆಗೆ ನಿರುದ್ಯೋಗ ಪರಿಸ್ಥಿತಿಯು ಸುಧಾರಿಸುವ ಬದಲು ಅತಿಯಾಗಿ ಬೆಳೆಯ ತೊಡಗಿತು. ಇದಕ್ಕೆ ಯುದ್ಧಾನಂತರದ ಅತ್ಯಂತ ಆಳವಾದ, ಗಂಭೀರವಾದ ಮತ್ತು ಆರ್ಥಿಕ ವ್ಯವಹಾರಗಳ ಎಲ್ಲಾ ಕ್ಷೇತ್ರಗಳಿಗೂ ಹಬ್ಬುವ ಈ ಬಿಕ್ಕಟ್ಟಿನ ಸಹಜ ಪ್ರವೃತ್ತಿಯೇ ಕಾರಣವಾಗಿತ್ತು. ಅಲ್ಲದೆ ಆರ್ಥಿಕ ಬಿಕ್ಕಟ್ಟಿನೊಂದಿಗೆ ಅದರ ಬೆಳವಣಿಗೆಗೆ ಸಂಬಂಧಿಸಿದ ಶಕ್ತಿ (energy)ಯ ಕೊರತೆಯ ಮೂಲವಸ್ತುಗಳ ಅಭಾವದ ಮತ್ತು ಕರೆನ್ಸಿಯ ಬಿಕ್ಕಟ್ಟುಗಳೂ ಸೇರಿಕೊಂಡಿದ್ದವು. ಬಿಕ್ಕಟ್ಟಿನ ಅನಂತರದ ನಿರುದ್ಯೋಗ ಪರಿಸ್ಥಿತಿಯನ್ನು 1974-75ರ ಬಿಕ್ಕಟ್ಟಿನ ಗಂಭೀರತೆ ಮತ್ತು ಅದು ಆರ್ಥಿಕ ಚಕ್ರದ (economic cycle)ಲ್ಲಿನ ಮತ್ತು ಅದರ ಹೊರಗಿನ ಕೆಲ ಅಂಶಗಳೊಂದಿಗೆ ಬೆರೆತುದರ ಪರಿಣಾಮಗಳು ನಿರ್ಧರಿಸಿದ್ದುವು ಮತ್ತು ಇಂದಿಗೂ ನಿರ್ಧರಿಸುತ್ತವೆ.

ಈ ಎರಡು ಅಂಶಗಳೂ ಅಭಿವೃದ್ಧಿ ಹೊಂದಿದ ಎಲ್ಲಾ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಕ್ರಿಯಾಪ್ರವೃತ್ತವಾಗಿದ್ದುದರ ಪರಿಣಾಮವಾಗಿ ಹಿಂದೆ ಇಟಲಿ, ಅಮೆರಿಕ ಮತ್ತು ಕೆನಡಾ ದೇಶಗಳಲ್ಲಿ ಮಾತ್ರ ಕಂಡು ಬರುತ್ತಿದ್ದ ನಿರುದ್ಯೋಗ ಪರಿಸ್ಥಿತಿಯ ತೀವ್ರತೆಯು ಈಗ ಎಲ್ಲಾ ಬಂಡವಾಳಶಾಹಿ ದೇಶಗಳಿಗೂ ತಟ್ಟಿದೆ. 1979ರ ಬೇಸಿಗೆಯಲ್ಲಿ ಪಶ್ಚಿಮ ಜರ್ಮನಿಯ ನಿರುದ್ಯೋಗ ಪರಿಸ್ಥಿತಿಯಲ್ಲಿ ಕಾಣಿಸಿದ ಅಲ್ಪ ಕಡಿತದಿಂದ ಪರಿಸ್ಥಿತಿಯಲ್ಲಿ ಏನೂ ವ್ಯತ್ಯಾಸವಾಗಲಿಲ್ಲ. ಇತ್ತೀಚಿಗಿನವರೆಗೆ "ಸ್ಕೇಂಡಿನೇವಿಯನ್ ಸಮಾಜವಾದ" ವೆಂದು ಪರಿಗಣಿಸಲ್ಪಡುತ್ತಿದ್ದ ಡೆನ್ಮಾರ್ಕಿನಲ್ಲಿ 1977ರಲ್ಲಿ ನಿರುದ್ಯೋಗದ ಮಟ್ಟವು 1973ರ ಮಟ್ಟಕ್ಕಿಂತ ಎಂಟು ಪಟ್ಟು ಹೆಚ್ಚಿತ್ತಲ್ಲದೆ, 1978ರಲ್ಲಿ ಶೇ 9.5 ರಷ್ಟು ದುಡಿಯಲು ಶಕ್ತರಿರುವ ಜನರು ಇದರ ಪರಿಣಾಮಕ್ಕೊಳಗಾದರು. ಈ ಅವಧಿಯಲ್ಲಿ ಆಸ್ಟ್ರೇಲಿಯಾ, ಬೆಲ್ಜಿಯಂ, ಸ್ಪೇನ್ ಮತ್ತು ಫಿನ್‌ಲ್ಯಾಂಡ್‌ಗಳಲ್ಲಿ ನಿರುದ್ಯೋಗಿ ಜನರ ಸಂಖ್ಯೆ ಮೂರು ಪಾಲಷ್ಟು ಹೆಚ್ಚಿತು. 1979ರ ಬೇಸಿಗೆಯಲ್ಲಿ ಯುರೋಪಿಯನ್ ಇಕಾನಾಮಿಕ್ ಕಮ್ಯೂನಿಟಿ (E E C)ಯ ರಾಷ್ಟ್ರಗಳಲ್ಲಿ ನಿರುದ್ಯೋಗವು ಪುನಃ ಅತ್ಯಂತ ತೀವ್ರವಾಗಿ ಏರಿತು.

ಅಮೇರಿಕದಲ್ಲಿ ಮಾತ್ರ ಕಳೆದೆರಡು ವರ್ಷಗಳಲ್ಲಿ ನಿರುದ್ಯೋಗದಲ್ಲಿ ಸ್ವಲ್ಪ ಇಳಿಮುಖ ಪ್ರವೃತ್ತಿ ಕಂಡುಬಂದಿದೆ; ಈ ವರ್ಷಾರಂಭದಲ್ಲಿ ಅಲ್ಲಿ 6ಮಿಲಿಯ ನಿರುದ್ಯೋಗಿ ಜನರಿದ್ದು, ಒಟ್ಟು ಕಾರ್ಮಿಕ ಶಕ್ತಿಯಲ್ಲಿ ಇವರ ಪಾಲು ಶೇ. 6 ರಷ್ಟಾಗಿತ್ತು. 1980ರ ಮೊದಲಿಗೆ ನಿರುದ್ಯೋಗವು ಶೇ.8. 2 ರಷ್ಟು ಏರುವ ನಿರೀಕ್ಷೆಯಿದೆ. ಅರ್ಥಾತ್ ನಿರುದ್ಯೋಗಿಗಳ ಸಂಖ್ಯೆ ಇನ್ನೂ 2.5 ಮಿಲಿಯದಷ್ಟು ಹೆಚ್ಚಲಿದೆ.

ಬಂಡವಾಳಶಾಹಿ ಜಗತ್ತಿನ ನಿರುದ್ಯೋಗ ಮಟ್ಟದ ನೈಜ ಚಿತ್ರವನ್ನು ಬೂರ್ಶ್ವಾ ಅಂಕಿಅಂಶಗಳು ನೀಡುವುದಿಲ್ಲವೆಂಬುದನ್ನು ಮರೆಯಲಸಾಧ್ಯ. ಸಾಮಾನ್ಯವಾಗಿ ಈ ಅಂಕಿಅಂಶಗಳು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ದಾಖಲು ಮಾಡಲ್ಪಟ್ಟ ನಿರುದ್ಯೋಗಿ ಜನರನ್ನು ಮಾತ್ರ ಒಳಗೊಂಡಿರುತ್ತವೆ. ಮತ್ತು ಈರೀತಿ ದಾಖಲು ಮಾಡಲ್ಪಡದಿರುವ ನಿರುದ್ಯೋಗಿಗಳನ್ನು ಅವು ಸೂಚಿಸುವುದಿಲ್ಲ. ಅಮೇರಿಕದ ಲೇಬರ್ ಇಲಾಖೆಯು ಪ್ರಕಟಿಸಿದಂತೆ, ದಾಖಲು ಮಾಡದಿರುವ ಜನರು ಅಧಿಕೃತ ನಿರುದ್ಯೋಗಿಗಳ ಪಡೆಯ ಸುಮಾರು ಅರ್ಧದಷ್ಟಿರುತ್ತಾರೆ.

ಪ್ರಸ್ತುತ ನಿರುದ್ಯೋಗ ಪರಿಸ್ಥಿತಿಯ ಇನ್ನೊಂದು ವೈಶಿಷ್ಟ್ಯವೇನೆಂದರೆ ಹೆಚ್ಚುತ್ತಿರುವ ನಿರುದ್ಯೋಗಿಗಳ ಸಾಮಾಜಿಕ ಒಟ್ಟುಕೂಡುವಿಕೆಯಿಂದ ಅದರ ಸ್ವರೂಪ (structure)ದಲ್ಲಿ ಆದ ಬದಲಾವಣೆ ಹಾಗೂ ಸ್ತ್ರೀಯರು ಮತ್ತು ಯುವಜನರು ಅಧಿಕ ಸಂಖ್ಯೆಯಲ್ಲಿ ನಿರುದ್ಯೋಗಿಗಳಾಗುತ್ತಿರುವುದು.

ಬೆಲೆಗಳ ಮತ್ತು ಜೀವನ ವೆಚ್ಚದ ಸತತವಾದ ಏರಿಕೆಯಿಂದ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಅನೇಕ ಕುಟುಂಬಗಳಿಗೆ ಯಜಮಾನನ ಆದಾಯದಿಂದಲೇ ಜೀವನ ನಿರ್ವಹಣೆ ಕಷ್ಟವಾದ್ದರಿಂದ ಸ್ತ್ರೀಯರು ಹೆಚ್ಚಿನ ಆದಾಯಕ್ಕಾಗಿ ಅಧಿಕ ಸಂಖ್ಯೆಯಲ್ಲಿ ಪ್ರಯತ್ನಿಸುತ್ತಿದ್ದಾರೆ.

ಆರ್ಥಿಕ ಉತ್ಕರ್ಷ (economic boom)ದ ಸಮಯದಲ್ಲಿ ಉದ್ಯಮಿಗಳು ಸ್ತ್ರೀಯರಿಗೆ ಉದ್ಯೋಗ ನೀಡಲು ಮುಂದೆ ಬರುತ್ತಾರೆ. ಯಾಕೆಂದರೆ ಸ್ತ್ರೀಯರಿಗೆ ಕಡಿಮೆ ವೇತನ ನೀಡುವ ಮೂಲಕ ಹೆಚ್ಚು ಲಾಭಗಳಿಸಲು ಅವರಿಗೆ ಸಾಧ್ಯವಾಗುತ್ತದೆ. ಆರ್ಥಿಕ ಪರಿಸ್ಥಿತಿ ಹಾಳಾಗುತ್ತಾ ಹೋದಂತೆ ಆದರ ಅದು ತೀರ ಕೆಳಮಟ್ಟಕ್ಕೆ ತಲುಪುವ ಮೊದಲೇ, ಉದ್ಯೋಗಗಳಿಂದ ಕಿತ್ತೆಸೆಯಲ್ಪಡುವವರಲ್ಲಿ ಸ್ತ್ರೀಯರೇ ಮೊದಲಿಗರು. ಇದು ಉದ್ಯಮಿಗಳ ಹಿತಾಸಕ್ತಿಗಳಿಗೆ ಅನುಗುಣವಾಗಿಯೇ ಇದೆ. ಯಾಕೆಂದರೆ ಸ್ತ್ರೀಯರನ್ನು ಕೆಲಸದಿಂದ ವಜಾಮಾಡುವಾಗ ಅವರು ಎದುರಿಸುವ ತೊಂದರೆ ಅತ್ಯಲ್ಪ. ಆರ್ಥಿಕ ಉತ್ಕರ್ಷದಲ್ಲಿ ಸ್ತ್ರೀನಿರುದ್ಯೋಗಿಗಳು ಪುರುಷರಿಗಿಂತ ಕಡಿಮೆ.ಯಿರುವುದಕ್ಕೂ, ಆರ್ಥಿಕ ಬಿಕ್ಕಟ್ಟಿನಲ್ಲಿ ಇದು ತದ್ವಿರುದ್ಧವಾಗಿರುವುದಕ್ಕೂ ಇದೇ ಕಾರಣ.

ಈ ಪ್ರವೃತ್ತಿಯು ಹಲವಾರು ಬಂಡವಾಳಶಾಹಿ ರಾಷ್ಟ್ರಗಳಲ್ಲಿ ರೂಢಮೂಲವಾಗಿದೆ. ಫ್ರಾನ್ಸಿನಲ್ಲಿ ಅಧಿಕೃತ ನಿರುದ್ಯೋಗಿ ಸ್ತ್ರೀಯರು ಶೇ.53ರಷ್ಟಾದರೆ ಬೆಲ್ಜಿಯಂನಲ್ಲಿ ಶೇ. 60 ಮತ್ತು ಯುರೋಪಿನ ಮಾರುಕಟ್ಟೆ ರಾಷ್ಟ್ರಗಳಲ್ಲಿ ಸರಾಸರಿ ಶೇ. 50. ಆದರೆ ಒಟ್ಟು ದುಡಿಯುವ ಜನರ ಪೈಕಿ ಸ್ತ್ರೀಯರು ಕೇವಲ ಶೆ. 37ರಷ್ಟು ಮಾತ್ರ ಇದ್ದಾರೆ.

ದುಡಿಮೆಯ ಮಾರುಕಟ್ಟೆಯ ಪ್ರಸ್ತುತ ಪರಿಸ್ಥಿತಿಯಲ್ಲಿ ಕಂಡುಬರುವ ಒಂದು ಅತ್ಯಂತ ಗಂಭೀರ ಹಾಗೂ ಅಪಾಯಕಾರಿಪ್ರವೃತ್ತಿಯೆಂದರೆ ಯುವ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿರುವುದು. ಕೆಲಸ ಮಾಡಲು ಶಕ್ತರಿರುವ ಜನರ ಪೈಕಿ ಯುವಜನರು ಬರೇ ಶೇ. 20ರಷ್ಟಿರುವುದಾದರೂ, 25 ವರ್ಷ ಪ್ರಾಯವರೆಗಿನ ಪೂರ್ಣ ನಿರುದ್ಯೋಗಿ ಜನರು ಶೇ.40ರಷ್ಟಿದ್ದಾರೆ. ಸ್ವೀಡನಿನ ನಿರುದ್ಯೋಗಿ ಜನರ ಪೈಕಿ ಸುಮಾರು ಅರ್ಧದಷ್ಟು ಯುವಜನರಿದ್ದು, ಇದು ಹಿಂದಿನ 40ವರ್ಷಗಳಲ್ಲಿ ಕಂಡುಬಂದ ಅತೀ ದೊಡ್ಡ ಸಂಖ್ಯೆಯಾಗಿದೆ. ಇಟಲಿಯ 1.6ಮಿಲಿಯ ನಿರುದ್ಯೋಗಿಗಳ ಪೈಕಿ 800,000 ಮಂದಿ ತರುಣ ತರುಣಿಯರು ಕೆಲಸಕ್ಕಾಗಿ ಅಲೆಯುತ್ತಿದ್ದಾರೆ.

ರಾಷ್ಟ್ರೀಯ ಅಲ್ಪ ಸಂಖ್ಯಾತ ವರ್ಗಕ್ಕೆ ಸೇರಿದ ಯುವಜನರು ವಿಶೇಷವಾದ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಉದಾಹರಣೆಗೆ, ಅಮೆರಿಕದ ನ್ಯಾಶನಲ್ ಅರ್ಬನ್ ಲೀಗ್ (ಅತೀ ದೊಡ್ಡ ಹಾಗೂ ಅತೀ ಹೆಚ್ಚು ಪ್ರಭಾವವಿರುವ ಕರಿಯರ ಸಂಘಟನೆಗಳ ಪೈಕಿ ಒಂದು) ಕಪ್ಪು ಯುವಜನ ನಿರುದ್ಯೋಗಿಗಳ ಸಂಖ್ಯೆ ಬಿಳಿ ಯುವ ನಿರುದ್ಯೋಗಿಗಳ ಹತ್ತು ಪಾಲಷ್ಟಿದೆಯೆಂದು ಹೇಳಿದೆ.

ಬಂಡವಾಳಶಾಹಿ ಸಂಶೋಧಕರು ಹೇಳುವಂತೆ ಯುವಜನರ ನಿರುದ್ಯೋಗ ಸಮಸ್ಯೆಗೆ ಜನಸಂಖ್ಯೆಯಲ್ಲಾದ ಬದಲಾವಣೆಯೊಂದೇ ಅಥವಾ ಯುದ್ಧಾನಂತರ ಅಧಿಕವಾಗಿ ಬೆಳೆದುನಿಂತ ನಿರುದ್ಯೋಗಿಗಳ ಸಂಖ್ಯೆಯೇ ಮುಖ್ಯ ಕಾರಣವಲ್ಲ. ಯುವಜನರ ಸಾಮಾನ್ಯ ಹಾಗೂ ವೃತ್ತಿಪರ ಶಿಕ್ಷಣಕ್ಕಾಗಿ ಹೆಚ್ಚು ಹಣ ವಿನಿಯೋಗಿಸಲು ಹಿಂಜರಿಯುವ ಬಂಡವಾಳಶಾಹಿ ಉದ್ಯಮಿಗಳ ಪ್ರವೃತ್ತಿ ಮತ್ತು ಈ ಉದ್ದೇಶಗಳಿಗಾಗಿ ಬೂರ್ಶ್ವಾ ಸರಕಾರಗಳಿಂದ ನಿಗದಿಮಾಡಲ್ಪಡುವ ಹಣವು ಕಡಿಮೆಯಾದುದೇ ಯುವಜನರ ನಿರುದ್ಯೋಗಕ್ಕೆ ಮುಖ್ಯ ಕಾರಣಗಳು. ಸಾಮಾನ್ಯ ಮತ್ತು ವೃತ್ತಿಪರ ಶಿಕ್ಷಣದ ಅಭಾವವು ಯುವ ಜನರನ್ನು ನೌಕರಿಗಾಗಿ ದೀರ್ಘಾನ್ವೇಷಣೆಯ ದುರ್ಗತಿಯ ಕಡೆಗೆ ಒಯ್ಯುತ್ತದೆ. ಪರಿಣಾಮವಾಗಿ ಆರ್ಥಿಕ ಪರಿಸ್ಥಿತಿ ಬಿಗಡಾಯಿಸಿದಾಗ ಅಥವಾ ಉತ್ಪಾದನೆಯಲ್ಲಿ ಕುಸಿತ ಪ್ರಾರಂಭವಾದಾಗ ಅವರು ಕೆಲಸದಿಂದ ಕಿತ್ತು ಹಾಕಲ್ಪಡುತ್ತಾರೆ.

ಈ ಹಿಂದಿನ ನಿರುದ್ಯೋಗಿಗಳಿಗೆ ಹೋಲಿಸಿದರೆ, ಈಗಿನ ನಿರುದ್ಯೋಗಿಗಳು ಸುಶಿಕ್ಷಿತರೂ, ಪದವೀಧರರೂ ಆಗಿರುವುದು ಮಾತ್ರವಲ್ಲ, ತೀರಾ ಯುವಕರಾಗಿಯೂ ಇಲ್ಲ. ಆದರೆ ಇದು ಮೇಲೆ ಹೇಳಿದ ಸಾಮಾನ್ಯ ಮತ್ತು ವೃತ್ತಿಪರ ಶಿಕ್ಷಣ ಪದ್ಧತಿಯಲ್ಲಿರುವ ನ್ಯೂನತೆಗಳನ್ನು ಅಲ್ಲಗಳೆಯುವುದಿಲ್ಲ. ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿಯು ಔದ್ಯೋಗಿಕ ಪರಿಸ್ಥಿತಿಯ ಮೇಲೆ ಇಬ್ಬಗೆಯ, ಆದರೆ ಪರಸ್ಪರ ವಿರುದ್ಧವಾದ ಪ್ರಭಾವವನ್ನು ಬೀರುತ್ತಿರುವುದು ಸತ್ಯ. ಅದು ಹೊಸ ಉದ್ಯೋಗಗಳನ್ನು ಸೃಷ್ಟಿಸುವುದರ ಮೂಲಕ (ಮುಖ್ಯವಾಗಿ ಪ್ರಾರಂಭದ ಹಂತದಲ್ಲಿ) ಉದ್ಯೋಗಾವಕಾಶಗಳನ್ನು ಹೆಚ್ಚಿಸಿದರೂ, ಮುಂದೆ ಅದರಿಂದ ಮನುಷ್ಯನ ದುಡಿಮೆಯ ಶಕ್ತಿಯು ತೊಲಗಿಸಲ್ಪಡುತ್ತದೆ. ಉತ್ಪಾದನಾ ಕ್ರಿಯೆಯು ಯಾಂತ್ರೀಕೃತವಾಗುತ್ತಾ ಹೋದಂತೆ, ಹೆಚ್ಚಿನ ಅರ್ಹತೆಯಿರುವ ಕೆಲಸಗಾರರ ಅವಶ್ಯಕತೆಯಿರುವ ಇಲೆಕ್ಟ್ರಾನಿಕ್ಸ್ ಮತ್ತು ಇತರ ಮುಂದುವರಿದ ತಾಂತ್ರಿಕತೆಗಳು ಪ್ರವೇಶಿಸಿ, ಈ ಸಿಬ್ಬಂದಿಗಳಿಗಾದಿರುವ ಬೇಡಿಕೆಯು ಕುಸಿಯುತ್ತದೆ. ತಾಂತ್ರಿಕ ಪ್ರಗತಿಗೆ ಕಾರಣವಾದ ಇವರ ವೈಜ್ಞಾನಿಕ ಮತ್ತು ತಾಂತ್ರಿಕ ಅರ್ಹತೆಗಳೇ ಇವರ ನಿರುಪಯುಕ್ತತೆಯನ್ನು ಹೆಚ್ಚಿಸುತ್ತವೆ. ತಾಂತ್ರಿಕ ಪ್ರಗತಿಗೆ ಅವರು ಹೆಚ್ಚು ಹೆಚ್ಚಾಗಿ ಬಲಿಯಾಗತೊಡಗುತ್ತಾರೆ. ವಿಜ್ಞಾನಿಗಳ ಮತ್ತು ಪರಿಣತರ ನಿರುದ್ಯೋಗವು 1971 ಮತ್ತು 1975ರ ಮಧ್ಯದ ಅವಧಿಯಲ್ಲಿ ಶೇ. 2.9 ರಿಂದ ಶೇ. 4.2ಕ್ಕೇರಿತ್ತು. ಇದು ಈಗ ಇನ್ನೂ ಹೆಚ್ಚಿದೆ. ಫಿನ್‌ಲಂಡಿನಲ್ಲಿ 1979ರ ವಸಂತದಲ್ಲಿ ಪದವೀಧರ ಇಂಜಿನಿಯರರ ಅಗತ್ಯವಿರುವ ಪ್ರತೀ ಹುದ್ದೆಗೆ 64 ಮಂದಿ, ತಾಂತ್ರಿಕತಜ್ಞನ ಕೆಲಸಕ್ಕೆ 48 ಮಂದಿ, ಪದವೀಧರ ಆರ್ಥಿಕ ತಜ್ಞನ ಪ್ರತಿ ಹುದ್ದೆಗೆ 65 ಮಂದಿ ಮತ್ತು ಅರಣ್ಯ ಮತ್ತು ಕೃಷಿ ಇಲಾಖೆಗಳಲ್ಲಿನ ಪ್ರತಿಯೊಂದು ಹುದ್ದೆಗೆ 73 ಮಂದಿ ಅಭ್ಯರ್ಥಿಗಳಂತೆ ಇದ್ದರು.

ಆಧುನಿಕ ಉತ್ಪಾದನಾ ಕ್ರಿಯೆಯಲ್ಲಿ ಬಿಳಿಕಾಲರ್ ನೌಕರರ ಪಾತ್ರ ತುಂಬಾ ಹೆಚ್ಚಿರುವುದಾದರೂ, ಅವರು ಅಧಿಕ ಸಂಖ್ಯೆಯಲ್ಲಿ ನಿರುದ್ಯೋಗಿಗಳಾಗುತ್ತಿದ್ದಾರೆ. ಬಂಡವಾಳಶಾಹಿ ನವೀಕರಣವು ಮುಖ್ಯವಾಗಿ ಕಛೇರಿಗಳಲ್ಲಿ ಕೆಲಸ ಮಾಡುವ ನೌಕರರ ವಿರುದ್ಧವಾಗಿ ಉಪಯೋಗಿಸಲ್ಪಡುವುದಾದರೂ, ಔದ್ಯೋಗಿಕ ಕ್ಷೇತ್ರವೂ ಸೇರಿದಂತೆ, ಈ ವರ್ಗವು ಬಂಡವಾಳಶಾಹಿ ಶೋಷಣೆಯ ಎಲ್ಲಾ ದುಷ್ಪರಿಣಾಮಗಳನ್ನೂ ತೀವ್ರವಾಗಿ ಅನುಭವಿಸುತ್ತಿದೆಯೆಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಪಶ್ಚಿಮ ಜರ್ಮನಿಯಲ್ಲಿ 1967ರಲ್ಲಿ ಶೇ. 17 ರಷ್ಟಿದ್ದ ಬಿಳಿಕಾಲರ್ ನೌಕರರು 1970ರಲ್ಲಿ ಶೇ. 43 ರಷ್ಟು ಹೆಚ್ಚಿದ್ದರು.

ನೌಕರಿ ಕಳೆದುಕೊಳ್ಳುವುದರಿಂದ ನಿರುದ್ಯೋಗ ಪರಿಹಾರ ಕ್ರಮಗಳ ಹೊರತಾಗಿಯೂ, ನಿರುದ್ಯೋಗಿಗಳಿಗೆ ಉಂಟಾಗುವುದು ಬರೇ ಆರ್ಥಿಕ ತೊಂದರೆಗಳು ಮಾತ್ರವಲ್ಲ, ನಿರುದ್ಯೋಗಿಯೊಬ್ಬನ ಕರುಣಾಜನಕ ಸ್ಥಿತಿಯ ಮೇಲೆ ಅವನ ಆತ್ಮವಿಶ್ವಾಸದ ಅಭಾವ ಮತ್ತು ಭವಿಷ್ಯದ ಬಗ್ಗೆ ಅವನಿಗಿರುವ ಹೆದರಿಕೆಗಳಿಂದ ಉಂಟಾಗುವ ನೈತಿಕ ಅಂಶಗಳೂ ಪರಿಣಾಮವುಂಟುಮಾಡುತ್ತವೆ. ಹಲವಾರು ಬಂಡವಾಳಶಾಹಿ ರಾಷ್ಟ್ರಗಳಲ್ಲಿ ನಡೆಸಿದ ಸಂಶೋಧನೆಗಳ ಪ್ರಕಾರ ದೀರ್ಘಾವಧಿಯ ನಿರುದ್ಯೋಗವು ಮನುಷ್ಯನ ಮೇಲೆ ಹಾನಿಕಾರಕ ಪರಿಣಾಮವುಂಟುಮಾಡುತ್ತದೆ. ನಿರುದ್ಯೋಗಿಗಳ ಪೈಕಿ ಶೇ. 50ರಷ್ಟಿರುವ ಲಘು ಅಥವಾ ಮಧ್ಯಮ ರೀತಿಯ ಮಾನಸಿಕ ಚಿಂತೆಗೆ ಗುರಿಯಾಗುವ ಜನರು ಉದ್ಯೋಗದಲ್ಲಿರುವ ಇಂತಹ ಜನರ ಮೂರು ಪಾಲಷ್ಟು ಇದ್ದಾರೆ.

ನಿರುದ್ಯೋಗ ಹೆಚ್ಚಿದಂತೆ ಕುಡಿತ ಮತ್ತು ಅಪರಾಧಗಳೂ ಹೆಚ್ಚುತ್ತವೆ. ಅದೇ ವೇಳೆ ಬಂಡವಾಳಶಾಹಿ ದೇಶಗಳಲ್ಲಿ ಲಭ್ಯವಿರುವ, ಆತ್ಮೀಯ ಮಾತುಕತೆಗೆ ಬಹಳವಾಗಿ ಉಪಯೋಗಿಸಲ್ಪಡುವ ಟೆಲಿಫೋನ್ ಸೌಕರ್ಯಗಳಿಗೆ ಮತ್ತು ತಮ್ಮ ಆರ್ಥಿಕ-ನೈತಿಕ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿಲ್ಲದೆ ಆತ್ಮಹತ್ಯೆಗೆ ಮನಮಾಡುವ ಜನರಿಗೆ ಮತ್ತು ಮನೋರೋಗಿಗಳಿಗಾಗಿ ಇರುವ ಸಲಹಾ ಸೌಲಭ್ಯಗಳಿಗೆ ಬೇಡಿಕೆ ಹೆಚ್ಚುತ್ತಿದೆ.

ಬಂಡವಾಳಶಾಹಿ ಉತ್ಪಾದನಾ ಕ್ರಮದ ಚೌಕಟ್ಟಿನಲ್ಲಿ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವುದು ಯಾವ ಬಂಡವಾಳಶಾಹಿ ಸರಕಾರಕ್ಕೂ ಸಾಧ್ಯವಿಲ್ಲ. ಈ ಸಮಸ್ಯೆಯ ಪ್ರಮಾಣವು ಆರ್ಥಿಕ ಸೀಮೆಯನ್ನು ದಾಟಿ ಬೆಳೆದುದರಿಂದ ಬಂಡವಾಳಶಾಹಿ ಪದ್ಧತಿಗೇ ಅದು ಒಂದು ರಾಜಕೀಯ ಗಂಡಾಂತರವಾಗಿದೆ. ಆದ್ದರಿಂದಲೇ ಪಾಶ್ಚಿಮಾತ್ಯ ರಾಷ್ಟ್ರಗಳ ಅನೇಕ ನಾಯಕರು ಮಿಲಿಯಗಟ್ಟಲೆ ನಿರುದ್ಯೋಗಿ ಜನರ ಬಗ್ಗೆ ತಮಗೆ ತೀವ್ರ ಕಾಳಜಿಯಿದೆಯೆಂಬ ಭ್ರಮೆಯನ್ನು ಹುಟ್ಟಿಸಲು ಮತ್ತು ಅಂತರರಾಷ್ಟ್ರೀಯ ನಿಯಂತ್ರಣಗಳ ಮೂಲಕ ಈ ಸಮಸ್ಯೆಯನ್ನು ಸ್ವಲ್ಪ ಸಡಿಲಗೊಳಿಸಲು ಪ್ರಯತ್ನಿಸುತ್ತಾರೆ. ರಾಂಬೊಲಿಟ್ (1975), ಪ್ಯೂಟೋರಿಕೊ (1976), ಲಂಡನ್ (1977), ಬಾನ್ (1978) ಮತ್ತು ಟೋಕಿಯೋ (1979)ಗಳಲ್ಲಿ ಸಭೆ ಸೇರಿದ್ದ ವಿವಿಧ ಬಂಡವಾಳಶಾಹಿ ರಾಷ್ಟ್ರಗಳ ಮತ್ತು ಸರಕಾರಗಳ ನಾಯಕರು ಈ ಸಮಸ್ಯೆಯನ್ನು ಚರ್ಚಿಸಿದ್ದಾರೆ. ಆದರೂ ಸಮಸ್ಯೆಯು ಪೂರ್ಣವಾಗಿ ಪರಿಹಾರವಾಗಲಿಲ್ಲ, ಮಾತ್ರವಲ್ಲ ಅಂತರರಾಷ್ಟ್ರೀಯ ನಿಯಂತ್ರಣಗಳ ಮೂಲಕ ಅದರ ತೀವ್ರತೆಯನ್ನು ಕಡಿಮೆ ಮಾಡುವ ಅವರ ಈ ಪ್ರಯತ್ನಗಳು ಏನೂ ಫಲಕಾರಿಯಾಗಲಿಲ್ಲ. ಇಂತಹ ಪ್ರತಿಯೊಂದು ಸಭೆಯಲ್ಲೂ ನಿರುದ್ಯೋಗವನ್ನು ಕಡಿಮೆ ಮಾಡಲೆತ್ನಿಸುವ ಭರವಸೆ ನೀಡಲ್ಪಟ್ಟಿದ್ದರೂ, ಪರಿಸ್ಥಿತಿಯು ತದ್ವಿರುದ್ಧವಾಗಿ ಹೋಗುತ್ತಿರುವುದು ಪ್ರತೀ ಮುಂದಿನ ಸಭೆಯಲ್ಲಿ ಖಚಿತವಾಗುತಿತ್ತು. ಲಂಡನ್ ಮತ್ತು ಬಾನ್‌ಗಳಲ್ಲಿ ನಡೆದ ಸಭೆಗಳ ಮಧ್ಯಾವಧಿಯಲ್ಲಿ ಅಭಿವೃದ್ಧಿಹೊಂದಿದ ರಾಷ್ಟ್ರಗಳಲ್ಲಿ ನಿರುದ್ಯೋಗಿಗಳ ಸಂಖ್ಯೆಯು 14 ರಿಂದ 17 ಮಿಲಿಯಕ್ಕೇರಿತು. ಸಾಮಾನ್ಯ ಮಾರುಕಟ್ಟೆಯು ಈ ವಿಚಾರದಲ್ಲಿ ಶಕ್ತಿಹೀನವಾಗಿದ್ದುದು ಸ್ಪಷ್ಟವಾಗಿತ್ತು. 1974ರಲ್ಲಿ ಯುರೋಪಿನ ಮಾರುಕಟ್ಟೆ ಸದಸ್ಯ ರಾಷ್ಟ್ರಗಳಲ್ಲಿ ಐರೋಪ್ಯ ಕುಟುಂಬಗಳ ಸಮಿತಿಯು ಹಾಕಿಕೊಂಡಿದ್ದ ಮೂರು ಪ್ರಮುಖ ಕಾರ್ಯಕ್ರಮಗಳಲ್ಲಿ ನಿರುದ್ಯೋಗವನ್ನು ಸಂಪೂರ್ಣವಾಗಿ ನಿವಾರಿಸುವುದು ಒಂದು ಕಾರ್ಯಕ್ರಮವಾಗಿತ್ತು ಆದರೆ 1974ರಲ್ಲಿ ಆ ರಾಷ್ಟ್ರಗಳಲ್ಲಿ 3.3 ಮಿಲಿಯದಷ್ಟಿದ್ದ ನಿರುದ್ಯೋಗಿ ಜನರ ಸಂಖ್ಯೆಯು ಈಗ 6 ಮಿಲಿಯಕ್ಕೇರಿದೆ.

ಸದ್ಯೋಭವಿಷ್ಯದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ನಿರುದ್ಯೋಗವು ಇನ್ನೂ ಹೆಚ್ಚಲಿರುವುದೆಂದು ಎಲ್ಲಾ ಆರ್ಥಿಕ ಮುನ್ಸೂಚನೆಗಳೂ ಭವಿಷ್ಯ ನುಡಿದಿವೆ. ಅಮೇರಿಕದ ಯು. ಎಸ್. ನ್ಯೂಸ್ ಅಂಡ್ ವರ್ಲ್ಡ್‌ರಿಪೋರ್ಟ್ ಎಂಬ ಪತ್ರಿಕೆಯ ಡಿಸೆಂಬರ್ 18, 1978ರ ಸಂಚಿಕೆಯು ಭವಿಷ್ಯದ ಪರಿಸ್ಥಿತಿಯ ಬಗ್ಗೆ ಈ ರೀತಿ ಹೇಳಿತ್ತು: "ಮುಂದಿನ ವರ್ಷ ವ್ಯವಹಾರವು ಕುಂಠಿತವಾಗಿ ಕೊನೆಗೆ ಸ್ಥಗಿತಗೊಳ್ಳಬಹುದು. ನಿರುದ್ಯೋಗವು ಹೆಚ್ಚಲಿರುವುದು. ಹಣದುಬ್ಬರದ ಕಿರುಕುಳವು ಎಂದಿನಂತೆಯೇ ಇರುವುದು." ಲಂಡನ್ ಗ್ರಾಜ್ಯುವೇಟ್ ಸ್ಕೂಲ್ ಆಫ್ ಬಿಸಿನೆಸ್ ಸ್ಟಡೀಸ್‌ನ ಡೈರೆಕ್ಟರ್ ಪ್ರೊ। ರಾಬರ್ಟ್ ಜೇಮ್ಸ್ ಬಾಲ್ ಡಿಸೆಂಬರ್ 30, 1978ರ ಫೈನಾನ್ಶಿಯಲ್ ಟೈಮ್ಸ್ ಪತ್ರಿಕೆಯಲ್ಲಿ ಬರೆಯುತ್ತಾ "ನಿರುದ್ಯೋಗವು ಐತಿಹಾಸಿಕವಾದ ಉನ್ನತ ಮಟ್ಟದಲ್ಲೇ ಮುಂದುವರಿಯುವುದು" ಎಂದಿದ್ದಾರೆ. ಅವರು ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಕಾನಾಮಿಕ್ ಅಂಡ್ ಸೋಶಿಯಲ್ ರೀಸರ್ಚ್‌ನ ಪರವಾಗಿ ನಡೆಸಿದ ಸಮೀಕ್ಷೆಯ ಪ್ರಕಾರ ಬ್ರಿಟನ್ನಿನಲ್ಲಿ 1983ರಲ್ಲಿ ನಿರುದ್ಯೋಗಿಗಳ ಸಂಖ್ಯೆಯು 2 ಮಿಲಿಯವನ್ನೂ ದಾಟಲಿದೆ. ಪಶ್ಚಿಮ ಜರ್ಮನಿಯ ಹೇಂಡೆಲ್ಸ್‌ಬ್ಲಾಟ್ ಪತ್ರಿಕೆಯ ಪ್ರಕಾರ ಅಲ್ಲಿ 1985ರಲ್ಲಿ ನಿರುದ್ಯೋಗಿ ಜನರ ಸಂಖ್ಯೆ (ಅಧಿಕೃತ ಹಾಗೂ ಅನಧಿಕೃತ)ಯು 3.4 ಮಿಲಿಯಕ್ಕೇರಲಿದೆ.

ನಿರುದ್ಯೋಗದ ಮೇಲೆ ಪರಿಣಾಮ ಬೀರುವ ಮತ್ತು ಅದನ್ನು ಉಲ್ಬಣಗೊಳಿಸುವ ಒಂದು ಪ್ರಧಾನ ಅಂಶವೆಂದರೆ ಶಸ್ತ್ರಾಸ್ತ್ರಗಳ ಪೈಪೋಟಿ. ಅದು ಬೃಹತ್ ಪ್ರಮಾಣದ ಸಂಪನ್ಮೂಲಗಳನ್ನು ಬೇರೆ ಕಡೆಗೆ ತಿರುಗಿಸಿ ಶಾಂತ ಪರಿಸ್ಥಿತಿಯ ಆರ್ಥಿಕ ವ್ಯವಹಾರಗಳಲ್ಲಿ ಹಣದ ವಿನಿಯೋಗವನ್ನು ಪರಿಮಿತಗೊಳಿಸುತ್ತದೆ ಮತ್ತು ತನ್ಮೂಲಕ ಹೊಸ ಉದ್ಯೋಗಗಳ ಸೃಷ್ಟಿಯನ್ನೂ, ಉತ್ಪಾದನಾ ಶಕ್ತಿಗಳ ಬೆಳವಣಿಗೆಯನ್ನೂ ತಡೆಹಿಡಿಯುತ್ತದೆ. ಯುದ್ಧ ಬಜೆಟಿನಲ್ಲಿ ಹೆಚ್ಚುವ ಪ್ರತೀ 100 ಡಾಲರಿನ ಪರಿಣಾಮವಾಗಿ, ವ್ಯಕ್ತಿಯೊಬ್ಬನ ಮೇಲೆ ಖರ್ಚು ಮಾಡಲ್ಪಡುವ ಹಣದಲ್ಲಿ 42 ಡಾಲರಿನಷ್ಟೂ, ಕೈಗಾರಿಕೆಗಳಲ್ಲಿ ತೊಡಗಿಸಲ್ಪಡುವ ಬಂಡವಾಳದಲ್ಲಿ 20 ಡಾಲರಿನಷ್ಟೂ ಕಡಿತವುಂಟಾಗುವುದು. ಮಿಲಿಟರಿಗಾಗಿ ನಿಗದಿ ಮಾಡಲ್ಪಡುವ ಹಣವು ಔದ್ಯೋಗಿಕ ಮಟ್ಟವನ್ನು ಕಾಪಾಡದಿರುವುದು ಮಾತ್ರವಲ್ಲ, ಅದು ಏನೂ ಪರಿಣಾಮಕಾರಿಯಲ್ಲದ ವಿಧಾನವಾಗಿದೆ. ನಾಗರಿಕ ಕ್ಷೇತ್ರದಲ್ಲಿ ವಿನಿಯೋಗಿಸಲ್ಪಡುವ ಪ್ರತಿ ಡಾಲರಿನ ಉತ್ಪಾದಕ ಶಕ್ತಿಯು (productivity) ಆ ಕ್ಷೇತ್ರದಲ್ಲಿನ ಔದ್ಯೋಗಿಕ ಮಟ್ಟವನ್ನು ಮಿಲಿಟರಿ ಕ್ಷೇತ್ರದ ಮಟ್ಟದ ಎರಡರಷ್ಟು ಕಾಪಾಡಲು ಶಕ್ತವಾಗಿದೆ. ಪಶ್ಚಿಮ ಜರ್ಮನಿಯ ಕಾರ್ಮಿಕ ಪತ್ರಿಕೆ ಗೆವೆರ್ಕ್ಸ್‌ಶಾಫ್ಟರ್ (ಸಂಚಿಕೆ 6, 1978)ರಲ್ಲಿ ಪ್ರಕಟಿತವಾದ ಲೆಕ್ಕಾಚಾರದ ಪ್ರಕಾರ, ಮಿಲಿಟರಿ ಕೈಗಾರಿಕೆಯಲ್ಲಿ 35,000 ಉದ್ಯೋಗಗಳನ್ನು ಸೃಷ್ಟಿಸಬಲ್ಲ ಒಂದು ಸಾವಿರ ಡಾಲರ್, ಕಟ್ಟಡಗಳ ರಚನೆ ಮತ್ತು ಆರೋಗ್ಯ ಸೇವೆಗಳಲ್ಲಿ 75,000, ಶಿಕ್ಷಣ ಮತ್ತು ಪೌರಾಡಳಿತಗಳಲ್ಲಿ ತಲಾ 100,000 ಮತ್ತು 132,000 ಉದ್ಯೋಗಗಳನ್ನು ಸೃಷ್ಟಿಸಬಲ್ಲುದು. ಆದ್ದರಿಂದ ಶಸ್ತ್ರಾಸ್ತ್ರಗಳ ಪೈಪೋಟಿಯನ್ನು ನಿಲ್ಲಿಸಿ, ಆರ್ಥಿಕ ಮೂಲಗಳನ್ನು ನಾಗರಿಕ ಕ್ಷೇತ್ರದ ಕೈಗಾರಿಕೆಗಳಲ್ಲಿ ತೊಡಗಿಸುವುದರಿಂದ ಔದ್ಯೋಗಿಕ ಕ್ಷೇತ್ರದಲ್ಲಿ ಮಹತ್ತರ ಪರಿಣಾಮ ಉಂಟಾಗಬಹುದೆಂಬುದು ಸ್ಪಷ್ಟ. ಇದನ್ನು ನಿರ್ಧರಿಸುವುದು ಬರೇ ಉದ್ಯೋಗಗಳ ಸಂಖ್ಯೆ ಮಾತ್ರವಲ್ಲ. ಅದು ಅಂತರರಾಷ್ಟ್ರೀಯ ಮಟ್ಟದಲ್ಲಿ ಕೆಲಸಗಳ ವಿಭಜನೆ ಮತ್ತು ವಿವಿಧ ಸಾಮಾಜಿಕ ಪದ್ಧತಿಗಳಿರುವ ರಾಷ್ಟ್ರಗಳ ಪರಸ್ಪರ ಆರ್ಥಿಕ ಮೈತ್ರಿಗೆ ಅಡ್ಡಿಯಾಗಿರುವ ಅಡೆತಡೆಗಳನ್ನು ನಿವಾರಿಸುವ ಮೂಲಕ ಜನರ ಉದ್ಯೋಗಾವಕಾಶಗಳನ್ನು ಬೃಹತ್ ಪ್ರಮಾಣದಲ್ಲಿ ಹೆಚ್ಚಿಸುತ್ತದೆ. ಬಂಡವಾಳಶಾಹಿ ಮತ್ತು ಸಮಾಜವಾದಿ ರಾಷ್ಟ್ರಗಳ ನಡುವಣ ಪರಸ್ಪರ ಸಹಕಾರಕ್ಕಾಗಿ ಕೈಗೊಂಡ ಪ್ರಗತಿಪರ ಕ್ರಮಗಳ ಪರಿಣಾಮವಾಗಿ, ಅವುಗಳೊಳಗಿನ ವಾಣಿಜ್ಯ ಸಂಬಂಧಗಳು ಅಭಿವೃದ್ಧಿಗೊಂಡು, ಬಂಡವಾಳಶಾಹಿ ಜಗತ್ತಿನಲ್ಲಿ 2 ಮಿಲಿಯ ಹೆಚ್ಚು ಜನರಿಗೆ ಉದ್ಯೋಗ ಲಭಿಸಿದೆ. ಈ ರಾಷ್ಟ್ರಗಳ ನಡುವೆ ಸೌಹಾರ್ದವು ಇನ್ನೂ ಬೆಳೆದುದಾದರೆ, ಪರಸ್ಪರ ಲಾಭದಾಯಕವಾದ ಆರ್ಥಿಕ ಸಹಕಾರಕ್ಕೆ ಇನ್ನೂ ಹೆಚ್ಚು ಅವಕಾಶ ದೊರೆಯುವುದಲ್ಲದೆ, ಪಾಶ್ಚಾತ್ಯ ರಾಷ್ಟ್ರಗಳ ಔದ್ಯೋಗಿಕ ಮಟ್ಟದ ಮೇಲೆ ಸತ್ಪರಿಣಾಮವಾಗುವುದರಲ್ಲಿ ಸಂದೇಹವಿಲ್ಲ.

ಬಂಡವಾಳಶಾಹಿ ಪದ್ಧತಿಗೆ ಭಿನ್ನವಾಗಿ, ಸಮಾಜವಾದಿ ಸಮಾಜದಲ್ಲಿ ಶ್ರಮ ಜೀವಿಗಳ ಜೀವನ ಮಟ್ಟವನ್ನು ಸುಧಾರಿಸುವುದೇ ಆರ್ಥಿಕ ಅಭಿವೃದ್ಧಿಯ ಗುರಿಯಾಗಿದೆ. ಅಲ್ಲಿ ನಿರುದ್ಯೋಗದ ವರ್ಗೀಯ ಮತ್ತು ಸಾಮಾಜಿಕ ನೆಲೆ ನಿವಾರಿಸಲ್ಪಟ್ಟಿದೆ. ಸಮಾಜವಾದಿ ವ್ಯವಸ್ಥೆಯಲ್ಲಿ ತಾಂತ್ರಿಕ ಪ್ರಗತಿಯು ಜನರ ಉದ್ಯೋಗಗಳನ್ನು ಕಬಳಿಸುವ ಒಡುಗಲ್ಲ; ಬದಲಾಗಿ ಅವರಿಗೆ ಹೆಚ್ಚು ಆರಾಮವನ್ನು ಒದಗಿಸಿ, ಅವರನ್ನು ಭೌತಿಕವಲ್ಲದ ಶಿಕ್ಷಣ, ಆರೋಗ್ಯ ಸೇವೆಗಳು, ಸಂಸ್ಕೃತಿ ಮುಂತಾದ ಕೆಲಸಗಳಿಗೆ ಹಚ್ಚಲು ಅವಕಾಶ ಮಾಡಿಕೊಡುವ ಒಂದು ವರ. ಆದ್ದರಿಂದ ಶ್ರಮ ಜೀವಿಗಳ ದುಡಿಮೆಯ ಹಕ್ಕನ್ನು ಕಾಪಾಡಲು ಸಮಾಜವಾದಿ ವ್ಯವಸ್ಥೆಗೆ ಮಾತ್ರ ಸಾಧ್ಯ.

●

ಚಿನ್ನದ ಗಣಿ ಕಾರ್ಮಿಕರಿಗೆ ಅಕ್ಕಿ ಒದಗಿಸಲು ಒತ್ತಾಯ

ಕೋಲಾರದ ಚಿನ್ನದಗಣಿಯ ಕಾರ್ಮಿಕರಿಗೆ ತಲಾ 6 ಕೆ. ಜಿ. ಅಕ್ಕಿ ಪಡಿತರದ ಮುಖಾಂತರ ಸಿಕ್ಕುತ್ತಿದ್ದು ತಾ. 12-2-1980 ರಂದು ಹಠಾತ್ತನೆ 4 ಕೆ. ಜಿ. ಗೆ ಇಳಿಸಲಾಯಿತು. ಮೈಸೂರು ಗಣಿಯ ಕಾರ್ಮಿಕರ ಕುಟುಂಬಗಳವರು (ಮಹಿಳೆಯರು, ಮಕ್ಕಳು) ಈ ಕಡಿತವನ್ನು ಪ್ರತಿಭಟಿಸಿ 12-2-1980 ರಂದು ಗಣಿಯ ಮ್ಯಾನೇಜರ್‌ರವರ ಕಛೇರಿಯ ಮುಂದೆ ಪ್ರದರ್ಶನ ನಡೆಸಿದರು. 13-2-80 ರಂದು ಮೈಸೂರು ಗಣಿ ಕಾರ್ಮಿಕರು ಈ ಪಡಿತರ ಕಡಿತವನ್ನು ವಿರೋಧಿಸಿ ಪ್ರತಿಭಟನಾ ಪ್ರದರ್ಶನವನ್ನು ನಡೆಸಿದರು. ಸಿ ಐ ಟಿ. ಯು. ನೇತೃತ್ವದಲ್ಲಿರುವ ಮೈಸೂರು ಮೈನ್ ವರ್ಕರ್ಸ್ ಯೂನಿಯನ್-ಮಾರಿಕುಪ್ಪ, ಈ ಕಾರ್ಮಿಕ ಸಂಘದ ಅಧ್ಯಕ್ಷ ಕಾಮ್ರೇಡ್ ಎ. ಕಣ್ಣನ್, ಉಪಾಧ್ಯಕ್ಷ ಕಾಮ್ರೇಡ್ ಎಸ್. ಸವರಿದಾಸ್, ಕಾರ್ಯದರ್ಶಿ ಕಾಮ್ರೇಡ್ ಟಿ. ಎಸ್. ಮಣಿಯವರು ಮ್ಯಾನೇಜರ್‌ರವರನ್ನು ಭೇಟಿಮಾಡಿ ಮೊದಲು ಕೊಡುತ್ತಿದ್ದಷ್ಟೇ ಅಕ್ಕಿಯನ್ನು ಪಡಿತರದ ಮೂಲಕ ಕೊಡಬೇಕೆಂದು ಒತ್ತಾಯಪಡಿಸಿದರು.

ಈ ಕಾರ್ಮಿಕ ಮುಖಂಡರು ಮತ್ತು ಬಿ ಜಿ ಎಮ್ ಎಲ್., ಹೆಲ್ತ್ ಅಂಡ್ ಜನರಲ್ ಎಂಪ್ಲಾಯೀಸ್ ಯೂನಿಯನ್‌ನ ಉಪಾಧ್ಯಕ್ಷರಾದ ಕಾಮ್ರೇಡ್ ಜಿ. ಆರ್ಥರ್‌ರವರನ್ನೊಳಗೊಂಡ ಶಿಷ್ಟಮಂಡಳಿಯೊಂದು 13-2-80ರಂದು ಬೆಂಗಳೂರಿನಲ್ಲಿ ರಾಜ್ಯ ಸರ್ಕಾರದ ಆಹಾರ ಮತ್ತು ನಾಗರಿಕ ಸರಬರಾಜಿನ ಇಲಾಖೆಯ ನಿರ್ದೇಶಕರನ್ನು ಭೇಟಿಮಾಡಿ ಮೊದಲು ಸಿಕ್ಕುತ್ತಿದ್ದಷ್ಟೇ ಅಕ್ಕಿಯನ್ನು ಪಡಿತರದ ಮೂಲಕ ಒದಗಿಸುವುದನ್ನು ಮುಂದುವರಿಸಬೇಕೆಂದು ಕೇಳಿಕೊಂಡಿತು. ನಿರ್ದೇಶಕರು ಇದಕ್ಕೆ ಸಮ್ಮತಿಸಿದರು.

○

ಅನ್ನ ಸತ್ಯಾಗ್ರಹ ಪ್ರಾರಂಭ

ಉ. ಕ. ಜಿಲ್ಲೆ ದಾಂಡೇಲಿ ಕಾಗದ ಕಾರ್ಖಾನೆ ಕಾರ್ಮಿಕರ ಮುಷ್ಕರ ಮುಂದುವರಿದಿದೆ. ಕಳೆದ ವಾರ ತಹಸೀಲ್‌ದಾರರ ಕಛೇರಿಯ ಮುಂದೆ ಹಾಗೂ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಪ್ರಾರಂಭಿಸಲಾಗಿದ್ದ ಧರಣಿ ಮುಷ್ಕರವನ್ನು ತಾ॥ 14-2-80 ರಿಂದ ಮತ್ತೊಂದು ಸ್ವರೂಪಕ್ಕೆ ತೆಗೆದುಕೊಂಡು ಹೋಗಿದ್ದಾರೆ. ಕಾರ್ಖಾನೆ ಆಡಳಿತ ವರ್ಗದ ಉನ್ನತ ಅಧಿಕಾರಿಯ ಮನೆಯ ಮುಂದೆ ಸಿ.ಐ.ಟಿ.ಯು ನೇತೃತ್ವದಲ್ಲಿ ಉಳಿದೆಲ್ಲಾ ಕಾರ್ಮಿಕ ಸಂಘಗಳು ಸೇರಿ ಅನ್ನ ಸತ್ಯಾಗ್ರಹವನ್ನು ಪ್ರಾರಂಭಿಸಿವೆ.

ಮುಷ್ಕರ ಮೂರನೇ ತಿಂಗಳಿಗೆ ಕಾಲಿಟ್ಟಿದೆ. ದಾಂಡೇಲಿ ಪೇಪರ್‌ಮಿಲ್ ಕಾರ್ಮಿಕರು ವಿವಾದವನ್ನು ಬಗೆಹರಿಸಲು ನಡೆಸಿದ ಎಲ್ಲಾ ಪ್ರಯತ್ನಗಳೂ ವಿಫಲವಾಗಿವೆ. ಆಡಳಿತ ವರ್ಗದವರ ಹಟಮಾರಿತನದಿಂದಾಗಿ ಕಾರ್ಮಿಕರಿಗೆ, ದಾಂಡೇಲಿಯ ಜನತೆಗೆ ಹಾಗೂ ದೇಶಕ್ಕೆ ನಷ್ಟವುಂಟಾಗಿದೆ. ಮುಷ್ಕರವನ್ನು ವಿರೋಧಿಸುವಂತೆ ಸರಕಾರದೊಂದಿಗೆ ಸೇರಿಕೊಂಡು ಸೋಮಾನಿಯವರು ಮಾಡುತ್ತಿರುವ ತಂತ್ರ ಸೋಲುವುದು ಖಂಡಿತವೆಂದು ಸಂಯುಕ್ತ ಕ್ರಿಯಾಸಮಿತಿ ಸಂಚಾಲಕ ಕಾಂ. ಸ್ಕೆಲೇರ್ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

○

'ಭದ್ರಸರಕಾರ'ದ ಮುನ್ಸೂಚನೆಗಳು

[3ನೇ ಪುಟದಿಂದ]

ರಾಜ್ಯಸಭೆಯಲ್ಲಿಯೂ ಬಿರುಸಿನ ಚರ್ಚೆಗಳು ನಡೆದವು. ವಿರೋಧ ಪಕ್ಷಗಳು ತಮ್ಮ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿದವು. ಹರಿಯಾಣದ ಮುಖ್ಯಮಂತ್ರಿ ಭಜನ್‌ಲಾಲ್ ಮತ್ತು ಕೇಂದ್ರ ಗೃಹಮಂತ್ರಿ ಜೈಲ್ ಸಿಂಗ್ ಹಾಗೂ ಕೇಂದ್ರ ಕಾನೂನು ಮಂತ್ರಿ ಶಿವಶಂಕರ್ ಇವರೆಲ್ಲಾ ಎನ್. ಕೆ. ಸಿಂಗ್‌ರನ್ನು ಹರಿಯಾಣ ಪೋಲೀಸರು ದಸ್ತಗಿರಿ ಮಾಡಿರಲಿಲ್ಲ ಎಂದು ಹೇಳಿಕೆ ನೀಡಿದಾಗ, ಗೃಹಮಂತ್ರಿ ಹಾಗೂ ಕಾನೂನು ಮಂತ್ರಿಗಳ ವಿರುದ್ಧ ಹಕ್ಕು ಚ್ಯುತಿಯ ಸೂಚನೆಯನ್ನು ಉಭಯ ಸದನಗಳಲ್ಲಿಯೂ ಮಂಡಿಸಲಾಯಿತು. ಸಿಂಗ್‌ರನ್ನು ದಸ್ತಗಿರಿ ಮಾಡದಿದ್ದರೆ 'ಅಪಹರಣ' ಮಾಡಿದ ಅಪರಾಧವಾಗುವುದೆಂದು ವಾದಿಸಿ ಕೇಂದ್ರ ಮತ್ತು ಹರಿಯಾಣ ರಾಜ್ಯಸರಕಾರಗಳನ್ನು ತರಾಟೆಗೆ ತೆಗೆದುಕೊಳ್ಳಲಾಯಿತು. ಹಕ್ಕುಚ್ಯುತಿ ಸೂಚನೆಗಳನ್ನು ತಳ್ಳಿಹಾಕಿದರೂ ಸಂವಿಧಾನದ ಒಳಗೂ ಹೊರಗೂ ತೀವ್ರ ಪ್ರತಿಭಟನೆಗಳನ್ನು ವ್ಯಕ್ತಪಡಿಸಲಾಯಿತು. ಸರಕಾರ ದುಡುಕಿ ಪ್ರತೀಕಾರಕ್ರಮ ಕೈಕೊಂಡು ಕೈಸುಟ್ಟುಕೊಳ್ಳುವಂತಾಯಿತು. ಪರಿಣಾಮವಾಗಿ, ಸಿ. ಬಿ. ಐ. ಯ 200ಕ್ಕೂ ಹೆಚ್ಚಿನ ಅಧಿಕಾರಿಗಳು, ಡಿ. ಎಸ್. ಪಿ. ಮತ್ತು ಇನ್‌ಸ್ಪೆಕ್ಟರ್‌ಗಳೂ ಸೇರಿ, ಸಿ ಬಿ ಐ. ಡೈರೆಕ್ಟರಿಗೆ ತಮ್ಮ ಲಿಖಿತ ಪ್ರತಿಭಟನೆಯನ್ನು ಸಾಮೂಹಿಕವಾಗಿ ಸಲ್ಲಿಸಿದರು. ರಾಜಕೀಯ ಪ್ರತೀಕಾರ ಕ್ರಮಗಳಿಂದ ತಮಗೆ ರಕ್ಷಣೆ ಕೋರಿದರು.

ಎನ್. ಕೆ. ಸಿಂಗ್‌ರನ್ನು ದಸ್ತಗಿರಿ ಮಾಡಿದ್ದಕ್ಕೆ ಕಾರಣ? 'ಕಿಸ್ಸಾಕುರ್ಸಿಕಾ' ಪ್ರಕರಣದಲ್ಲಿ ಸಿಂಗ್‌ರ ವಿಚಾರಣೆಯ ಆಧಾರದಲ್ಲಿ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಫೆಬ್ರವರಿ, 1979ರಲ್ಲಿ ಸಂಜಯ ಗಾಂಧಿ ಮತ್ತು ಬನ್ಸಿಲಾಲ್ ಇಬ್ಬರಿಗೂ 2ವರ್ಷಗಳ ಕಠಿಣ ಶಿಕ್ಷೆ ಮತ್ತು ತಲಾ ಅನುಕ್ರಮವಾಗಿ ರೂ 10,000 ಮತ್ತು ರೂ 25,000 ದಂಡವಿಧಿಸಲಾಗಿತ್ತು. ಈಗ ಈ ಪ್ರಕರಣ ಸುಪ್ರೀಂ ಕೋರ್ಟಿನಲ್ಲಿ ವಿಚಾರಣೆಯ ಅಂತಿಮ ಹಂತದಲ್ಲಿದೆ. ಇಂದಿರಾಗಾಂಧಿ ಅಧಿಕಾರಕ್ಕೆ ಬಂದೊಡನೆ ಸಿಂಗ್‌ರನ್ನು ರಜೆಯಲ್ಲಿ ಹೋಗಲು ಕೇಳಿಕೊಳ್ಳಲಾಯಿತು. ಮೊಕದ್ದಮೆ ನಡೆಯುತ್ತಿದ್ದು ಮುಗಿಯುತ್ತಾ ಬಂದಿರುವಾಗ ರಜೆಯಲ್ಲಿ ಹೋಗಲು ನಿರಾಕರಿಸಿದ ಸಿಂಗರ ಮೇಲೆ ಈಗ ಹೊಸ ಸರಕಾರ ಪ್ರತೀಕಾರ ಕ್ರಮ ಕೈಕೊಳ್ಳುತ್ತಿದೆ!

ಮಣಿಪುರದಲ್ಲಿ ತುರ್ತುಪರಿಸ್ಥಿತಿಯಲ್ಲಿ ನಡೆದ ಅತ್ಯಾಚಾರ ಅತಿರೇಕಗಳ ಕುರಿತಾಗಿ ಬಲರಾಜ್ ಟ್ರಿಖಾ ಅವರ ಏಕಸದಸ್ಯತ್ವದ ಆಯೋಗವನ್ನು ಆಗಿನ ಜನತಾ ಸರಕಾರ ನೇಮಿಸಿತ್ತು. ಅಲ್ಲಿ ಜನತಾ ಸರಕಾರವು ಬಿದ್ದು ಹೋಗಿ ನವೆಂಬರ್ 1979ರಲ್ಲಿ ಕೇಂದ್ರಾಡಳಿತವು ಜಾರಿಗೆ ಬಂದ ಕೆಲವೇ ದಿನಗಳಲ್ಲಿ ಟ್ರಿಖಾ ಅವರ ಮನೆಯನ್ನು ಪೋಲೀಸರು ನುಗ್ಗಿ ಅವರು ವಿಚಾರಣಾ ಆಯೋಗದ ಪರವಾಗಿ ಸಂಗ್ರಹಿಸಿದ ಹೆಚ್ಚಿನ ದಾಖಲೆಗಳನ್ನು ಅಪಹರಿಸಲಾಯಿತು. ಆದರೂ ಅವರ ಅದ್ಭುತ ನೆನಪು ಶಕ್ತಿಯಿಂದಲೇ ತಮ್ಮ ವರದಿಯನ್ನು ನವೆಂಬರ್ ತಿಂಗಳ ಕೊನೆಯಲ್ಲಿ ಆಗಿನ ಪ್ರಧಾನಿ ಚರಣ ಸಿಂಗ್‌ರಿಗೆ ಒಪ್ಪಿಸಿದ್ದರು. ಇಂದಿರಾ ಗಾಂಧಿ, ಗವರ್ನರ್ ಎಲ್. ಪಿ. ಸಿಂಗ್, ಮಾಜಿ ಮುಖ್ಯಮಂತ್ರಿ ದೊರೇಂದ್ರ ಸಿಂಗ್, ಮುಂತಾದ ಪ್ರಮುಖ ವ್ಯಕ್ತಿಗಳನ್ನು ಟ್ರಿಖಾ ಅವರು ಹಲವಾರು ಬಾರಿ ವಿಚಾರಣೆಗೆ ಗುರಿಪಡಿಸಿ ಅವರ ಅಪರಾಧಗಳನ್ನು ಬಯಲುಗೊಳಿಸಿದ್ದರು ಮತ್ತು ಅವರ ವಿರುದ್ಧ ಸೂಕ್ತಕ್ರಮ ಕೈಕೊಳ್ಳಬೇಕೆಂದು ಶಿಫಾರಸು ಮಾಡಿದ್ದರು. ಪರಿಣಾಮವಾಗಿ ಕಳೆದ ಚುನಾವಣೆಯ ನಂತರ ಕೇಂದ್ರದಲ್ಲಿ ಇಂದಿರಾ ಗಾಂಧಿ ಮತ್ತು ಮಣಿಪುರದಲ್ಲಿ ದೊರೇಂದ್ರ ಸಿಂಗ್ ಪುನಃ ಅಧಿಕಾರಕ್ಕೆ ಬಂದೊಡನೆ ಟ್ರಿಖಾ ಅವರನ್ನು ಜನವರಿ ತಾ. 13 ಮತ್ತು 17ರಂದು ದಸ್ತಗಿರಿ ಮಾಡಲಾಯಿತು. ಅವರನ್ನು ಕ್ರಿಮಿನಲ್ ಅಪರಾಧಿಗಳಿರುವಲ್ಲಿ ಜೈಲಿಗೆ ಸೇರಿಸಲಾಯಿತು. ಕಾಂಗ್ರೆಸ್ (ಐ) ಪಕ್ಷದವರು ಟ್ರಿಖಾ ಅವರ ಜೈಲು ನಿವಾಸಕ್ಕೆ ಬಂದು ಅವರನ್ನು ಮೂದಲಿಸಿದರು ಮತ್ತು ಛೀಮಾರಿ ಹಾಕಿ ಅವರ ಮುಖಕ್ಕೆ ಉಗುಳಿದರೆಂದು ಪತ್ರಿಕೆಗಳಲ್ಲಿ ವರದಿಯಾಗಿತ್ತು.

ವಿಶೇಷ ಕೋರ್ಟುಗಳ ನಿಷ್ಕ್ರಿಯತೆ :

ಸಿ. ಬಿ. ಐ. ಮತ್ತು ಐ. ಬಿ. ಗಳಲ್ಲಿ ಹೊಸ ಅಧಿಕಾರಿಗಳನ್ನು ನೇಮಿಸಲಾಗಿದ್ದು, ಹೊಸ ಸರಕಾರಿ ವಕೀಲರನ್ನು ನೇಮಿಸಲಾಗಿದ್ದು, ಕೇಂದ್ರ ಸರಕಾರದ ಹೆಚ್ಚಿನ ಖಾತೆಗಳಲ್ಲಿ ಹೊಸ ಉನ್ನತ ಅಧಿಕಾರಿಗಳನ್ನು ನೇಮಿಸಲಾಗಿದ್ದು ತುರ್ತುಪರಿಸ್ಥಿತಿಯ ಅತಿರೇಕ ಅತ್ಯಾಚಾರಗಳ ವಿರುದ್ಧ ವಿಶೇಷ ಕೋರ್ಟುಗಳಲ್ಲಿ ವಿಚಾರಣೆಯಲ್ಲಿರುವ ಹೆಚ್ಚಿನ ಮೊಕದ್ದಮೆಗಳನ್ನು ಒಂದೊಂದಾಗಿ ಸಾಕಷ್ಟು ಪುರಾವೆಗಳಿಲ್ಲ ಎಂಬ ನೆಪದಿಂದ ಕೈಬಿಡಲಾಗುತ್ತಿದೆ. ಇತ್ತೀಚೆಗೆ ಕೇಂದ್ರ ಗೃಹಖಾತೆಯು ಸಿ ಬಿ ಐ.ಯ ಎಲ್ಲಾ ದಸ್ತಾವೇಜುಗಳನ್ನು ತರಿಸಿಕೊಂಡು ಮರುಪರಿಶೀಲನೆ ನಡೆಸುತ್ತಿದೆ ಎಂದು ತಿಳಿದುಬಂದಿದೆ. ಇದರ ಉದ್ದೇಶ ಎರಡು ಎಂದು ಊಹಿಸಲಾಗಿದೆ. ಒಂದು, ಮೊಕದ್ದಮೆಗಳನ್ನು ತನಿಖೆಮಾಡುತ್ತಿರುವ ಸಿ. ಬಿ. ಐ. ಅಧಿಕಾರಿಗಳ ವಿವರ ತಿಳಿದುಕೊಳ್ಳುವುದು. ಆಮೇಲೆ ಅವರು ತಮ್ಮ ಪುರಾವೆಗಳು ಸಮರ್ಥನೀಯವಲ್ಲ ಎಂದು ಒಪ್ಪಿಕೊಳ್ಳದಿದ್ದರೆ ಅವರನ್ನು ಸೂಕ್ತ ರೀತಿಯಲ್ಲಿ ತರಾಟೆಗೆ ತೆಗೆದುಕೊಳ್ಳಬಹುದು! ಎರಡು, ಮೊಕದ್ದಮೆಗಳಿಗೆ ಸಂಬಂಧಿಸಿದ ಪೂರಕ ದಾಖಲೆಗಳನ್ನು ಸಂಗ್ರಹಿಸುವುದು. ಆಮೇಲೆ ಅಗತ್ಯವಿದ್ದರೆ ಅವುಗಳನ್ನು ನಿರ್ನಾಮಗೊಳಿಸಬಹುದು! ಸಧ್ಯ, ಸಿ. ಬಿ. ಐ. ವಿಚಾರಣೆಗಳಲ್ಲಿ ದೇಶದ ಕೆಲವು ಅತ್ಯಂತ ಪ್ರಮುಖ ವ್ಯಕ್ತಿಗಳ ವಿದೇಶಗಳಲ್ಲಿರುವ ಬ್ಯಾಂಕು ವ್ಯವಹಾರಗಳೂ ಸೇರಿವೆ. ಈ ತರಿತಾದ ದಾಖಲೆಗಳನ್ನು ಮುಚ್ಚಿಡುವ ಉದ್ದೇಶವೂ ಇರಬಹುದು. ಅಂತೂ ಪ್ರಾಮಾಣಿಕ ಅಧಿಕಾರಿಗಳಿಗೆ ಈಗ ದಿಗಿಲು ದಿಗ್ಭ್ರಮೆ ಉಂಟಾಗಿದೆ.

ಇಷ್ಟರಲ್ಲಿಯೇ, ಆರ್. ಕೆ. ಧವನ್, ಪಿ. ಸಿ. ಸೇಥಿ, ಯಶಪಾಲ್ ಕಪೂರ್, ಡಾ॥ ಸುರೇಶ್ ವಾಸುದೇವ್, ಎಂ. ಆರ್. ಧವನ್, ಕೆ. ಎಲ್. ಶಾಫ್ ಮತ್ತು ಸುಧೀರ್ ನರೀಸ್ ಮತ್ತು ಇತರ ಮೂವರ ವಿರುದ್ಧ ಸಿ. ಬಿ. ಐ. ಮೊಕದ್ದಮೆಗಳನ್ನು ನ್ಯಾಯವಾದಿ ಡಿ ಸಿ. ಅಗರ್‌ವಾಲರ ವಿಶೇಷಕೋರ್ಟಿನಿಂದ ಹಿಂತೆಗೆದುಕೊಳ್ಳಲು ಕೇಂದ್ರ ಸರಕಾರ ಆದೇಶಿಸಿದೆ. ಇವರೆಲ್ಲರನ್ನೂ ಆಗಸ್ಟ್, 1977ರಲ್ಲಿ ದಸ್ತಗಿರಿ ಮಾಡಲಾಗಿತ್ತು. ಆ ಮೇಲೆ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿತ್ತು. ತಮ್ಮ ಅಧಿಕಾರ ದುರುಪಯೋಗಿಸಿಕೊಂಡು ಅಕ್ರಮವಾಗಿ ಕಾನೂನುಬಾಹಿರವಾಗಿ ತಮಗೆ ಮತ್ತು ಆಗಿನ ಆಳುವ ಪಕ್ಷಕ್ಕೆ ಹಣಸಂಗ್ರಹಿಸಿದ್ದಾಗಿಯೂ, ಚುನಾವಣೆಯಲ್ಲಿ ಜೀಪುಗಳನ್ನು ಬಳಸಿದ್ದಾಗಿಯೂ, ರಿಯಾಯತಿಯಲ್ಲಿ ಚುನಾವಣಾ ಭಿತ್ತಿಪತ್ರಗಳನ್ನು ಬರೆಸಿಕೊಂಡದ್ದಾಗಿಯೂ ಇವರನ್ನು ಕ್ರಿಮಿನಲ್ ಅಪರಾಧಿಗಳೆಂದು ಆಪಾದಿಸಲಾಗಿತ್ತು. ಇಂದಿರಾ ಗಾಂಧಿಯ ಹೊಸ ಸರಕಾರ ಅಧಿಕಾರಕ್ಕೆ ಬಂದೊಡನೆ ಇವರನ್ನು ದೋಷಮುಕ್ತರನ್ನಾಗಿ ಮಾಡಲಾಯಿತು. ಹಾಗೆಯೇ ಭೀಮಸೇನ್‌ನಾಚಾರ್ ಮೊದಲಾದವರನ್ನು ಅಕ್ರಮವಾಗಿ ತುರ್ತುಪರಿಸ್ಥಿತಿಯಲ್ಲಿ ದಸ್ತಗಿರಿ ಮಾಡಿದ ಮೊಕದ್ದಮೆಯನ್ನೂ ಹಿಂತೆಗೆಯಲಾಯಿತು.

ಹೊಸ ಕೇಂದ್ರ ಕಾನೂನು ಮಂತ್ರಿ ಶಿವಶಂಕರ್ ಇದು ತನಕದ ಅನುಭವದ ಮೇರೆಗೆ ಸುಪ್ರೀಂಕೋರ್ಟಿಗೆ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳ ಅಪೀಲುಗಳನ್ನು ವಿಚಾರಿಸುವ ಅಧಿಕಾರವನ್ನು ತೆಗೆಯಬೇಕೆಂದೂ, ಅದು ಕೇವಲ ಸಂವಿಧಾನಕ್ಕೆ ಸಂಬಂಧಿಸಿದ ಮೊಕದ್ದಮೆಗಳನ್ನು ವಿಚಾರಿಸಬೇಕೆಂದೂ, ಈ ಕುರಿತು ನ್ಯಾಯಾಂಗದಲ್ಲಿ ಬದಲಾವಣೆ ತರಬೇಕೆಂದೂ ಪ್ರಚಾರ ಪ್ರಾರಂಭಿಸಿದ್ದಾರೆ. ಅವರ ನೇತೃತ್ವದಲ್ಲಿ ಎಲ್ಲಾ ವಿರೋಧಪಕ್ಷಗಳು ತಮ್ಮ ತೀವ್ರ ಅಸಮಾಧಾನ ತೋರಿಸಿದ್ದರೂ, ಮುಂಜಾಗ್ರತಾ ಬಂಧನದ ಕಾನೂನನ್ನೂ ಇಷ್ಟರಲ್ಲಿಯೇ ಜಾರಿಗೊಳಿಸಲಾಯಿತು.

ಇಂದಿರಾಗಾಂಧಿಯ ಸರಕಾರ ನಿರೀಕ್ಷೆಯಂತೆ ರಾಜ್ಯ ಸರಕಾರಗಳನ್ನು ಉರುಳಿಸುವುದು, ತನ್ನ ಏಕಪಕ್ಷ ಸರ್ವಾಧಿಕಾರವನ್ನು ಹೇರುವುದು, ವಿಶೇಷ ಕೋರ್ಟುಗಳನ್ನು ನಿಷ್ಕ್ರಿಯಗೊಳಿಸಿ ಸ್ವಜನರ ವಿರುದ್ಧವಿರುವ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುವುದು, ತುರ್ತುಪರಿಸ್ಥಿತಿಯಲ್ಲಿ ಅತಿರೇಕ ಅತ್ಯಾಚಾರಗಳನ್ನು ನಡೆಸಿದವರನ್ನು ಪುನಃ ಅಧಿಕಾರಕ್ಕೇರಿಸುವುದು ಭರದಿಂದ ನಡೆಸುತ್ತಿದೆ. ಈ ಕ್ರಮಗಳ ವಿರುದ್ಧ ಎಡ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳು ಎಚ್ಚರದಿಂದಿರಬೇಕಾಗಿದೆ.

○

ದೂರವಾಣಿ ಮತ್ತು ತಂತಿ ಮಜೂರರ ಸಂಘದ ವಾರ್ಷಿಕ ಸಭೆ

ಕೊಡಗು ಜಿಲ್ಲೆ, ಮಡಿಕೇರಿಯ ಪುರಭವನದಲ್ಲಿ ತಾ॥ 11-2-80 ರಂದು ನಡೆದ ವಾರ್ಷಿಕ ಸಭೆಯ ಅಧ್ಯಕ್ಷತೆಯನ್ನು ಕಾಂ. ವಿ. ಕೃಷ್ಣ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ವಲಯ ಅಧ್ಯಕ್ಷ ಕಾಂ. ಬಿ. ರಾಮಕೃಷ್ಣ ಮತ್ತು ಪ್ರಧಾನ ಕಾರ್ಯದರ್ಶಿ ಕಾಂ. ಪಿ. ಫಕ್ಕೀರ ಪೂಜಾರಿಯವರು ಬಂದಿದ್ದರು. ಸ್ವಾಗತ ಭಾಷಣ ಮಾಡಿದ ಕಾಂ. ಎಸ್. ಟಿ ರಾಮಯ್ಯನವರು ನಂತರ ವರದಿಯನ್ನು ಓದಿದರು.

ಕಾಂ. ರಾಮಕೃಷ್ಣ ಮಾತನಾಡುತ್ತಾ, ಅಸಂಘಟಿತ ಕಾರ್ಮಿಕ ವರ್ಗ ಸಂಘಟಿತರಾಗಿ ತಮ್ಮ ಹಕ್ಕು ಬಾಧ್ಯತೆಗಳನ್ನು ಉಳಿಸಿಕೊಳ್ಳಲು ಹೋರಾಡಬೇಕು ಎಂದರು. ಕಾಂ. ಪಕ್ಕೀರ ಪೂಜಾರಿಯವರು ಮಾತನಾಡಿ, ದಿನಗೂಲಿ ಕಾರ್ಮಿಕರು ಅಧಿಕಾರಿಗಳಿಂದಲೂ, ಕಾನೂನುಗಳಿಂದಲೂ ವಂಚಿತರಾಗಿರುವುದರಿಂದ ಹೋರಾಟವೊಂದೇ ದಾರಿಯೆಂದರು. ಸಂಘಟನೆಯನ್ನು ರಾಜ್ಯದ ಎಲ್ಲಾ ಮೂಲೆಗಳಿಗೆ ವಿಸ್ತರಿಸಬೇಕೆಂದು ಕಾಂ. ರವಿ, ಬಿ.ಎಮ್. ರಾಮಣ್ಣ, ಚಿನ್ನಪ್ಪ, ಭೀಮಯ್ಯ ಮೊದಲಾದವರು ವಿವರಿಸಿದರು.

ಕೆಳಕಂಡ ನಿರ್ಣಯಗಳನ್ನು ಸಭೆ ಸರ್ವಾನುಮತದಿಂದ ಅಂಗೀಕರಿಸಿತು.

1. ನಾಲ್ಕು ತಿಂಗಳುಗಳಿಂದ ನಿಲ್ಲಿಸಿದ ಕೆಲಸ ಆರಂಭಿಸದಿದ್ದರೆ ಮಡಿಕೇರಿ ಉಪ-ವಿಭಾಗದ ಮುಂದೆ ಧರಣಿ ಸತ್ಯಾಗ್ರಹ.

2. ಏಪ್ರಿಲ್‌ನಲ್ಲಿ ಜರುಗಲಿರುವ ಸಮ್ಮೇಳನವನ್ನು ಯಶಸ್ವಿಗೊಳಿಸುವುದು.

3. ಮಡಿಕೇರಿ ಉಪ-ವಿಭಾಗದ ಅಧಿಕಾರಿಯವರ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಲಾಯಿತು.

ಹೊಸ ಸಾಲಿಗೆ ಕೆಳಕಂಡವರನ್ನು ಪದಾಧಿಕಾರಿಗಳನ್ನಾಗಿ ಆರಿಸಲಾಯಿತು.

ಅಧ್ಯಕ್ಷ :
ಕಾಂ. ವಿ. ಕೃಷ್ಣ

ಉಪಾಧ್ಯಕ್ಷ :
ಕಾಂ. ವಿ. ಎಂ. ಮಂಜಪ್ಪ

ಕಾರ್ಯದರ್ಶಿ :
ಕಾಂ. ಎಸ್. ಟಿ. ರಾಮಯ್ಯ

ಸಹ ಕಾರ್ಯದರ್ಶಿ :
ಕಾಂ. ತ್ಯಾಂಪಣ್ಣ

ಕೋಶಾಧಿಕಾರಿ :
ಕಾಂ. ಹೆಚ್. ಎಲ್. ಸೋಮಯ್ಯ

ಆರು ಜನರ ಕಾರ್ಯಕಾರಿ ಸಮಿತಿಯನ್ನೂ ರಚಿಸಲಾಯಿತು.

●

ಹರಿಜನರ ಬಡತನಕ್ಕೆ ಭೂ ಸಂಬಂಧಗಳೇ ಕಾರಣ

ಪಿ. ರಾಮಮೂರ್ತಿ

[ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಹರಿಜನ, ಗಿರಿಜನ ಹಾಗೂ ಆಂಗ್ಲೋ ಇಂಡಿಯನ್ಸ್‌ಗಳಿಗೆ ಮೀಸಲಾತಿಯನ್ನು ಮತ್ತೆ ಹತ್ತು ವರ್ಷಗಳವರೆಗೆ ವಿಸ್ತರಿಸುವ 45ನೇ ಸಂವಿಧಾನ ತಿದ್ದುಪಡಿಯ ಬಗ್ಗೆ ರಾಜ್ಯಸಭೆಯಲ್ಲಿ ನಡೆದ ಚರ್ಚೆಯಲ್ಲಿ ಕಾಂ. ಪಿ. ರಾಮಮೂರ್ತಿಯವರು ಮಾಡಿದ ಭಾಷಣದ ಸಂಗ್ರಹ]

ಮಸೂದೆಯನ್ನು ಸ್ವಾಗತಿಸುತ್ತಾ, ನಾವು ಅಂದರೆ ಇಡೀ ಸಂಸತ್ತು ಮತ್ತು ಹಿಂದೂ ಸಮಾಜ ಆಳವಾಗಿ ಯೋಚಿಸಬೇಕಾದ ಒಂದು ಪ್ರಶ್ನೆಯೆಂದರೆ ಸ್ವಾತಂತ್ರ್ಯ ಬಂದು ಮೂವತ್ತು ವರ್ಷಗಳಾದರೂ, ಹತ್ತು ವರ್ಷಕ್ಕೊಮ್ಮೆ ಮೀಸಲಾತಿಯನ್ನು ಮುಂದುವರಿಸಬೇಕಾಗಿದೆ. ಮೂವತ್ತು ವರ್ಷಗಳ ಹಿಂದೆ ಯಾವ ಧ್ಯೇಯೋದ್ದೇಶಗಳನ್ನು ಇಟ್ಟುಕೊಂಡು ಹತ್ತು ವರ್ಷಗಳ ಮೀಸಲಾತಿಯನ್ನು ತಂದಿದ್ದರೋ ಅದನ್ನು ಮೂವತ್ತು ವರ್ಷಗಳಾದರೂ ಯಾಕೆ ಸಾಧಿಸಲು ಸಾಧ್ಯವಾಗಿಲ್ಲ? ಈ ಮೂಲಭೂತ ಪ್ರಶ್ನೆಯ ಬಗ್ಗೆಯೇ ನಾವು ಚಿಂತಿಸಬೇಕಾಗಿರುವುದು.

ಹೃದಯ ಪರಿವರ್ತನೆಯಾಗುವುದಿಲ್ಲ :

ನನ್ನ ಸನ್ಮಾನ್ಯ ಮಿತ್ರರಾದ ಶ್ರೀಮತಿ ಚಂದ್ರಶೇಖರ್‌ರವರು ಮೇಲು ಜಾತಿಯವರ ಹೃದಯ ಪರಿವರ್ತನೆಯ ಬಗ್ಗೆ ಮಾತನಾಡುತ್ತಿದ್ದರು. ಎಲ್ಲಿಯವರೆಗೆ ಸವರ್ಣೀಯರ ಹೃದಯ ಪರಿವರ್ತನೆ ಆಗುವುದಿಲ್ಲವೋ ಅಲ್ಲಿಯವರೆಗೆ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿಲ್ಲವೆಂದು ಅವರು ನುಡಿದರು.

[7ನೇ ಪುಟ ನೋಡಿ]

ಹರಿಜನರ ಬಡತನಕ್ಕೆ ಭೂ ಸಂಬಂಧಗಳೇ ಕಾರಣ

[6ನೇ ಪುಟದಿಂದ]

ದಬ್ಬಾಳಿಕೆ ಮಾಡುವವರ ಹೃದಯ ಪರಿವರ್ತನೆ ಆಗುವುದಿಲ್ಲ ಎಂಬುದು ನನ್ನ ಹೇವರಿಕೆ. ದಬ್ಬಾಳಿಕೆ ಮಾಡುವವರ ಹೃದಯ ಪರಿವರ್ತನೆಯಾದ ಪವಾಡವನ್ನು ಚರಿತ್ರೆ ನೀಡಲು ಸಾಧ್ಯವಾಗಿಲ್ಲ. ಕೆಲವು ವ್ಯಕ್ತಿಗಳು ಆಗಿರಬಹುದು, ಆದರೆ ಒಂದು ವರ್ಗವಾಗಿ ಅವರು ಎಂದೂ ಬದಲಾಗಿಲ್ಲ.

ಇಪ್ಪತ್ತರ ದಶಕದಲ್ಲಿ ಅಸಹಕಾರ ಚಳುವಳಿ ಪ್ರಾರಂಭವಾದಾಗಿನಿಂದ ಮಹಾತ್ಮಾಗಾಂಧಿಯವರು ಹರಿಜನರ ಕಲ್ಯಾಣದ ಮಾತು ಆಡುತ್ತಲೇ ಬಂದರು. ತುಂಬಾ ಹಿಂದಿನಿಂದಲೂ ನಮ್ಮ ದೇಶದಲ್ಲಿ ಅನೇಕ ಜನ ಸಮಾಜ ಸುಧಾರಕರು ಈ ಬಗ್ಗೆ ಪ್ರಯತ್ನ ಮಾಡಿದ್ದಾರೆ. ಬಂಗಾಳದಲ್ಲಿ ಚೈತನ್ಯರು ಸುಧಾರಣಾ ಚಳುವಳಿಯನ್ನೇ ಪ್ರಾರಂಭ ಮಾಡಿದರು. ದೇಶದ ಇತರೆ ಭಾಗಗಳಲ್ಲಿಯೂ ಇತರಯವರು ಸಮಾಜ ಸುಧಾರಣಾ ಚಳುವಳಿಗಳನ್ನು ನಡೆಸಿದರು. ಇದೆಲ್ಲಾ ಆದರೂ ಹಿಂದೂ ಸಮಾಜ ಇದರಿಂದ ಮುಕ್ತವಾಗಲಿಲ್ಲ.

ಮೊದಲಿನಿಂದಲೂ ಜಾತಿ ಎನ್ನುವುದು ಹಿಂದೂ ಸಮಾಜದಲ್ಲಿ ದಬ್ಬಾಳಿಕೆ ಮಾಡುವವರ ಕೈ ಆಯುಧವಾಗಿದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಈ ಜಾತಿವಿಭಜನೆಯನ್ನು ಈ ದೇಶದ ಆಸ್ತಿಯುಳ್ಳ ವರ್ಗ ಬಡವರ ಶೋಷಣೆ ಮಾಡಲು ಉಪಯೋಗಿಸಿಕೊಂಡಿತಲ್ಲದೆ, ಪ್ರಚಾರ ಮಾಡಿತು. ಬಡ ವರ್ಗದವರ ಸಾಮಾಜಿಕ ದುರ್ಬಲತೆ ಶೋಷಕರಿಗೆ ಒಂದು ಆಯುಧ ಸಿಕ್ಕಿದಂತಾಗಿದೆ, ಇದರಿಂದ ದುಡಿಯುವ ಜನರು ಬಂಡವಾಳಶಾಹಿ ಪದ್ಧತಿ ಹಾಗೂ ಶೋಷಣೆಯ ವಿರುದ್ಧ ಐಕ್ಯತೆಯಿಂದ ಹೋರಾಡಲು ಸಾಧ್ಯವಿಲ್ಲದಂತೆ ಮಾಡುತ್ತಾರೆ.

ಕೆಲವು ಜಾಗಗಳನ್ನು ಅಲ್ಲಿ, ಇಲ್ಲಿ ಮೀಸಲಾಗಿಡುವುದರಿಂದ ನೀವು ಕೇವಲ ಸಮಸ್ಯೆಯ ಮೇಲ್ಪದರವನ್ನು ಮಾತ್ರ ಮುಟ್ಟುತ್ತಿದ್ದೀರಿ, ಇದರಿಂದ ಕೆಲವರಿಗೆ ಕೆಲಸ ಸಿಗಬಹುದು, ಕೆಲವರಿಗೆ ಸಂಸತ್ತಿನಲ್ಲಿ ಸ್ಥಾನ ಸಿಗಬಹುದು. ಇದನ್ನೇ ನೀವು ಮಾಡುತ್ತಿರುವುದು. ಇದರಾಚೆ ಇರುವ ಬಹುಸಂಖ್ಯಾತ ಜನರು ಶೋಷಣೆ, ದಬ್ಬಾಳಿಕೆಗಳಿಗೆ ಗುರಿಯಾಗಿದ್ದಾರೆ, ಅವರ ಪರಿಸ್ಥಿತಿ ಕಳೆದ ಮೂವತ್ತು ವರ್ಷಗಳಿಂದ ಸುಧಾರಿಸಿಲ್ಲ. ಆದ್ದರಿಂದ ಇದರ ಬೇರಿನಲ್ಲಿಯೇ ಈ ಬಡಜನರ ಆರ್ಥಿಕ ಪರಿಸ್ಥಿತಿ ಉಳಿದಿದೆ.

ರಾಜಕೀಯ ಸಂಕಲ್ಪ ಎಲ್ಲಿ?

ನಾವು ಈ ದಿನ ಹರಿಜನರ ಬಗ್ಗೆ ಮಾತನಾಡುತ್ತಿದ್ದೇವೆ. ಶೇಕಡ 99 ರಷ್ಟು ಹರಿಜನರು ಭೂಹೀನ ಕೃಷಿ ಕೂಲಿಗಾರರು. ಈ ದೇಶದಲ್ಲಿ ಕಾಲ ಕಾಲಕ್ಕೆ ಅನೇಕ ಭೂ ಸುಧಾರಣೆ ಕಾನೂನುಗಳನ್ನು ರಚಿಸಿದ್ದರೂ, ಅವುಗಳನ್ನು ಜಾರಿ ಮಾಡಬೇಕೆಂಬ ರಾಜಕೀಯ ಸಂಕಲ್ಪ ಆಳುವ ಪಕ್ಷಕ್ಕಿದೆಯೇ? ಈ ಎಲ್ಲಾ ವರ್ಷಗಳಲ್ಲಿ ರಾಜಕೀಯ ದೃಢ ನಿರ್ಧಾರದ ಕೊರತೆಯಿಂದಲೇ ಹೀಗಾಯಿತೆಂದು ಯೋಜನಾ ಆಯೋಗದ ವರದಿಗಳ ಆಧಾರದ ಮೇಲೆ ದೃಢವಾಗಿ ನಾನು ಹೇಳಬಲ್ಲೆ.

ಈ ದೇಶವನ್ನು ಕಾಂಗ್ರೆಸ್ ಆಳುತ್ತಿದ್ದಾಗ ರಾಜಕೀಯ ಸಂಕಲ್ಪದ ಕೊರತೆಯಿಂದ ಭೂ ಸುಧಾರಣೆ ಶೈತ್ಯಾಗಾರದಲ್ಲಿ ಕೊಳೆಯಬೇಕಾಯಿತು. ಆಡಳಿತಯಂತ್ರ, ಹರಿಜನರಿಗೆ ಬೇಕಾದದ್ದನ್ನು ಒದಗಿಸಲು ವಿಫಲವಾಗಿದೆ, ಆದ್ದರಿಂದ ಅವರನ್ನು ಒಂದು ವರ್ಗವಾಗಿ ಸಂಘಟಿಸಿ ಅವರ ಹಕ್ಕುಗಳಿಗಾಗಿ ಹೋರಾಟ ಮಾಡಿದಾಗ ಮಾತ್ರ ನಮ್ಮನ್ನು ಜೈಲಿಗೆ ಹಾಕಲು ಆಡಳಿತ ಯಂತ್ರ, ಹಾಗೂ ಕಾಂಗ್ರೆಸ್ ಪಕ್ಷ ಮುಂದೆ ಬಂದಿತು. ನಾವು ಈ ಎಲ್ಲಾ ದಬ್ಬಾಳಿಕೆಗಳನ್ನು ಎದುರಿಸಬೇಕಾಯಿತು, ಇದು ವಾಸ್ತವಿಕ ಪರಿಸ್ಥಿತಿ.

ಉದಾಹರಣೆಗೆ, ಹೀಗೇ ವರ್ಷಗಳಲ್ಲಿ ಈ ಭೂ ಸುಧಾರಣೆಗಳನ್ನು ಜಾರಿಗೆ ತಂದಿರುವ ಒಂದು ರಾಜ್ಯ ಪ. ಬಂಗಾಳವೆಂದು ಶ್ರೀ ಪಾಸ್ವಾನ್ ರವರು ಈಗತಾನೇ ಎತ್ತಿ ಹೇಳಿದರು. ಆದರೆ ಅದೇ ಪ. ಬಂಗಾಳದಿಂದ ಬಂದಿರುವ ಕೇಂದ್ರ ಸಚಿವರು ಹೇಳುತ್ತಾರೆ: ಆ ರಾಜ್ಯ ಸರಕಾರವನ್ನು ಬಂಗಾಳ ಕೊಲ್ಲಿಗೆ ಬಿಸಾಕಬೇಕು ಎಂದು.

ಯಾಕೆ? ಭೂ ಸುಧಾರಣೆಯನ್ನು ಜಾರಿ ಮಾಡಲು ನಾವು ಬದ್ಧರಾಗಿದ್ದೇವೆ, ಹರಿಜನರಿಗೆ ಹಕ್ಕು ಕೊಡುತ್ತೇವೆ, ಅರ್ಧ ಹೊಟ್ಟೆಯವರಿಗೆ ಹಕ್ಕು ಕೊಡುತ್ತೇವೆ ಆದ್ದರಿಂದ ಸಮುದ್ರಕ್ಕೆ ಹಾಕಬೇಕೋ? ಇಂತಹ ರಾಜಕೀಯ ಧೋರಣೆಯಿಂದ, ಇಂತಹ ಪಟ್ಟಭದ್ರ ಹಿತಾಸಕ್ತಿ ಇರುವುದರಿಂದ, ಭೂ ಸುಧಾರಣೆಗಳನ್ನು ಜಾರಿ ಮಾಡಲು ಮನಸ್ಸಿಲ್ಲದ ಧೋರಣೆಯಿಂದ ಹರಿಜನರನ್ನು ಉದ್ಧಾರ ಮಾಡಲು ಸಾಧ್ಯವಿದೆಯೇ? ಹೃದಯ ಪರಿವರ್ತನೆಯ ಪ್ರಶ್ನೆ ಎಲ್ಲಿದೆ? ಯಾರ ಹೃದಯವನ್ನು ನೀವು ಬದಲಾಯಿಸುವುದು? ನಿಮ್ಮ ಪಕ್ಷದಲ್ಲಿರುವ ಜಮೀನುದಾರರ ಹೃದಯಗಳನ್ನು ನೀವು ಪರಿವರ್ತಿಸುತ್ತೀರಾ? ನಿಮ್ಮ ಪಕ್ಷದಲ್ಲಿ ಬಹುಸಂಖ್ಯಾತರಾಗಿರುವ ಶೋಷಕರ ಮನಸ್ಸು ಕರಗುವಂತೆ ನೀವು ಮಾಡಬಲ್ಲಿರಾ?

ವರ್ಗ ಹೋರಾಟದ ಪ್ರಶ್ನೆ:

ಪ್ರಶ್ನೆ ಮೂಲಭೂತವಾಗಿ ವರ್ಗ ಹೋರಾಟದ್ದು. ಹರಿಜನರನ್ನು ಮೇಲೆತ್ತಬೇಕೆಂದು ಯಾರಿಗೆ ಆಸಕ್ತಿಯಿದೆಯೋ ಅವರು, ಅವರನ್ನು ವರ್ಗದ ಆಧಾರದ ಮೇಲೆ ಸಂಘಟನೆ ಮಾಡಿ ಅವರ ಸಮಸ್ಯೆಗಳಿಗಾಗಿ ಹೋರಾಡಬೇಕು. ಒಂದು ಸಾರಿ ಅವರು ಸಂಘಟಿತರಾದರೆ ಪ್ರಪಂಚದ ಯಾವ ಶಕ್ತಿಯೂ ಅವರನ್ನು ತಡೆಯಲಾರದು.... ಇದೊಂದೇ ಪರಿಹಾರ ನಾನು ಯೋಚಿಸುವುದು.

(ಸಭೆಯಲ್ಲಿ ಅಡ್ಡಿಯುಂಟಾಗಿ "ಹಿಂಸಾಚಾರದ ಪ್ರಯತ್ನವೇ?" ಎಂದೊಂದು ಪ್ರಶ್ನೆ ಬಂತು)

ಕಾಂ. ಪಿ. ರಾಮಮೂರ್ತಿಯವರು ಉತ್ತರಿಸುತ್ತಾ, ನೀವು ಹಿಂಸಾಚಾರಕ್ಕೆ ಇಳಿದರೆ, ಹಿಂಸಾಚಾರದಿಂದಲೇ ನಿಮಗೆ ಉತ್ತರ ಸಿಗುತ್ತೆ. ನಾವೇನೂ ಹಿಂಸಾಚಾರಕ್ಕೆ ಇಳಿಯಲು ಬಯಸುವುದಿಲ್ಲ, ಆದರೆ ನಾವೇನು ಮಾಡುವುದು? ನಾವು ನಮ್ಮ ಹಕ್ಕುಗಳಿಗಾಗಿ ಹೋರಾಡುವಾಗ ನೀವು ಹಿಂಸಾಚಾರಕ್ಕೆ ಇಳಿದರೆ, ಪೋಲೀಸರನ್ನು ನಮ್ಮ ವಿರುದ್ಧ ಉಪಯೋಗಿಸಿದರೆ ನಾವೇನು ಮಾಡುವುದು? ಈ ಘಳಿಗೆಯಲ್ಲಿ ರಾಜ್ಯ ಪೋಲೀಸರು ಶೋಷಿತ ಹರಿಜನರಿಗೆ ರಕ್ಷಣೆ ಕೊಡುತ್ತಿದ್ದಾರೋ ಅಥವಾ ಭೂಮಾಲೀಕರ ಹಕ್ಕುಗಳ ರಕ್ಷಣೆ ಮಾಡುತ್ತಿದ್ದಾರೋ?

ಇದನ್ನು ಜಾರಿ ಮಾಡಬೇಕೆಂದು ಕಳೆದ ಮೂವತ್ತು ವರ್ಷಗಳಿಂದ ನೀವೇಕೆ ನಿರ್ಧರಿಸಲಿಲ್ಲ? ನಿಮ್ಮ ಪಕ್ಷದ ವರ್ಗ ಸಂಯೋಜನೆಯೇ ಈ ನಿರ್ಧಾರ ತಾಳದಂತೆ ಮಾಡಿದೆ. ಇದನ್ನು ನಾವು ಮರೆಯುವಂತಿಲ್ಲ. ಆದ್ದರಿಂದ ಅವರಿಗೆ ಮಾಡುವ ಮನವಿಗಳು ನಿಮ್ಮನ್ನು ಎಲ್ಲಿಗೂ ಒಯ್ಯುವುದಿಲ್ಲ.

ಎಲ್ಲಾ ಶೋಷಿತರು :

ನಾನು ಮತ್ತೊಂದು ವಿಷಯವನ್ನು ಹೇಳುವುದಿದೆ ಅದು ನನ್ನ ಸ್ನೇಹಿತ ಬುದ್ಧ ಪ್ರಿಯಾರವರು ಎತ್ತಿದ ಸಮಸ್ಯೆ. ಅವರು ಕ್ರಿಯಾಲೋಪವನ್ನು ಎತ್ತಿದ್ದಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ಸರಕಾರಿ ಆಜ್ಞೆಯಲ್ಲಿ ತಿದ್ದುಪಡಿ ಮಾಡಬೇಕು. ಪರಿಶಿಷ್ಟ ಜಾತಿಗೆ ಯಾರನ್ನೆಲ್ಲಾ ಸೇರಿಸಬೇಕು ಎನ್ನುವುದರ ಬಗ್ಗೆ ಎರಡು ಸಮಿತಿಗಳು ನೇಮಕಗೊಂಡಿವೆ. ಒಂದು 1957 ರಲ್ಲಿ, ಮತ್ತೊಂದು ಎರಡು ವರ್ಷಗಳ ಹಿಂದೆ.

ನಾನು ಹೇಳುವುದು ಯಾರೆಲ್ಲಾ ಹಿಂದೂ ಧರ್ಮವನ್ನು ತೊರೆದು ಕ್ರಿಶ್ಚಿಯನ್, ಬೌದ್ಧ ಅಥವಾ ಸಿಖ್ ಧರ್ಮಕ್ಕೆ ಮತಾಂತರಗೊಂಡಿದ್ದಾರೆಯೋ ಅವರು ಕೂಡಾ ತಮ್ಮ ಹಿಂದಿನ ಸ್ಥಿತಿಯಲ್ಲೇ ಇದ್ದಾರೆ. ಕೇರಳ ಮತ್ತಿತರ ಪ್ರದೇಶಗಳಲ್ಲಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡ ಹರಿಜನರು ಇತರರ ಹಿಂದೆ ಕುಳಿತುಕೊಳ್ಳಬೇಕು ವಿನಹಃ ಮುಂದೆ ಕೂರುವಂತಿಲ್ಲವೆಂಬುದು ನನಗೆ ತಿಳಿದಿದೆ. ಹೀಗೆ ಅವರು ಯಾವ ಧರ್ಮಕ್ಕೆ ಹೋದರೂ ಅವರ ಸಾಮಾಜಿಕ ದಬ್ಬಾಳಿಕೆಗೆ ಕೊನೆಯಿಲ್ಲ. ಆದ್ದರಿಂದ ಯಾವ ಧರ್ಮಕ್ಕೆ ಸೇರಿದ್ದರೂ ಎಲ್ಲಾ ಪರಿಶಿಷ್ಟ ಜಾತಿ ಮತ್ತು ಜನಾಂಗಗಳ ಜನರಿಗೂ ಸೌಲಭ್ಯಗಳು ಸಿಗುವಂತೆ ಕೂಡಲೇ ಜಾರಿಯಲ್ಲಿ ತರಲು ಆಜ್ಞೆ ಹೊರಡಿಸಬೇಕು. ಇದನ್ನು ಮಾಡದೇ ಹೋದರೆ ಮತ್ತೆ 10 ವರ್ಷಕ್ಕೊಮ್ಮೆ ಅವಧಿಯನ್ನು ವಿಸ್ತರಿಸುವ ಕೆಲಸ ಮಾಡುತ್ತಲೇ ಇರಬೇಕಾಗುತ್ತೆ. ನಮ್ಮ ಸಮಾಜದಲ್ಲಿ ಒಂದು ವಿಭಾಗ ಮತ್ತೊಂದು ವಿಭಾಗದ ಮೇಲೆ ದಬ್ಬಾಳಿಕೆ, ಶೋಷಣೆ ನಡೆಸುತ್ತಿದೆ ಎಂದು ಸಂವಿಧಾನದ ಮೂಲಕ ಜಗತ್ತಿಗೆ ಸಾರಿಕೊಳ್ಳುವುದು ಅತ್ಯಂತ ನಾಚಿಕೆಗೇಡಿನ ವಿಷಯ.

ಕೇವಲ ಹುಟ್ಟಿನ ಕಾರಣದಿಂದಾಗಿ ಒಂದು ದೇಶದಲ್ಲಿ ಒಂದು ವಿಭಾಗದ ಜನತೆಯ ಮೇಲೆ ಸತತವಾಗಿ ದಬ್ಬಾಳಿಕೆ ನಡೆಯುತ್ತಿದೆ ಎಂದು ಸಂವಿಧಾನದಲ್ಲಿ ಇದನ್ನು ಅಳವಡಿಸುವುದರ ಮೂಲಕ ಇಡೀ ಜಗತ್ತಿಗೆ ಘೋಷಿಸಿದಂತಾಗಿದೆ. ನಮ್ಮ ದೇಶಕ್ಕೆ ಕಪ್ಪು ಮಸಿಯಂತಿರುವ ಇದನ್ನು ಬೇಗ ನಿವಾರಿಸಬೇಕು. ಉದ್ಧಾರ ಒಳಗಿನಿಂದಲೇ ಆಗಬೇಕು ವಿನಹಃ ಹೊರಗಿನಿಂದಲ್ಲ.

ಆದ್ದರಿಂದ ಹರಿಜನ, ಪರಿಶಿಷ್ಟ ಜಾತಿ, ಜನಾಂಗಕ್ಕೆ ಸೇರಿದ ಜನರ ಉದ್ಧಾರವಾಗಬೇಕೆಂದು ಹೇಳುವವರು, ಮೊದಲು ಅವರನ್ನು ಸಂಘಟಿಸಬೇಕು. ಅವರ ಆರ್ಥಿಕ, ಸಾಮಾಜಿಕ ಹಕ್ಕುಗಳಿಗಾಗಿ ಅವರು ಹೋರಾಟ ಮಾಡುವಂತೆ ಮಾಡಬೇಕು ಇದೊಂದೇ ದಾರಿ ಉದ್ಧರಿಸಲು ಉಳಿದಿರುವುದು.

●

ರೈತ,ಕೃಷಿ ಕೂಲಿಗಾರರ ಸಂಘಟನೆ

ಧಾರವಾಡ ಜಿಲ್ಲಾ ರೈತ, ಕೂಲಿಗಾರರ ಪ್ರತಿನಿಧಿಗಳ ಸಭೆಯೊಂದು ತಾ. 11-2-80ರಂದು ಹಾವೇರಿಯ ಲೋಹಿಯಾ ನಿವಾಸದಲ್ಲಿ ಸೇರಿತು. ಸಭೆಯ ಅಧ್ಯಕ್ಷತೆಯನ್ನು ಶಿರಸಿಯ ತರುಣ ವಕೀಲ ಶ್ರೀ ರಮೇಶ್‌ಚೌಧರಿ ವಹಿಸಿದ್ದರು. ಜಿಲ್ಲೆಯ ಇಂದಿನ ಪರಿಸ್ಥಿತಿಯ ಸಂಬಂಧವಾಗಿ ರಾಮಣ್ಣ ಕ್ಷೌರದ, ಫಕೀರಪ್ಪ ಹೋತ್ನಳ್ಳಿ, ಅಕ್ಕಿ ಆಲೂರ, ಮೌಲಾನ ಕರ್ನಾಟಕ, ಹಾವಗಲ್ಲ ರಾಮಣ್ಣ, ಹಡಪದ ಧಾರವಾಡ, ನಾಮಧಾರಿ ಅಕ್ಕಿ, ಆಲೂರ ಕನ್ನಗೌಡರು ಮುಂತಾದವರು ಮಾತನಾಡಿದರು. ಆಮಂತ್ರಿತರಾಗಿ ಬಂದಿದ್ದ ಶಿರಸಿಯ ಖ್ಯಾತ ವಕೀಲರಾದ ಧಾರೇಶ್ವರ್ ರವರು ರೈತ-ಕೂಲಿಗಾರರನ್ನು ಸಂಘಟಿಸುವ ಅವಶ್ಯಕತೆಯನ್ನು ವಿವರಿಸಿದರು.

ಸಭೆಯಲ್ಲಿ ನಿತ್ಯೋಪಯೋಗಿ ವಸ್ತುಗಳ ಸರಿಯಾದ ವಿತರಣೆಗಾಗಿ ಪ್ರತಿ 300 ರೈತ-ಕೂಲಿಗಾರರ ಕುಟುಂಬಗಳಿಗೆ ಒಂದರಂತೆ ನ್ಯಾಯಬೆಲೆ ಅಂಗಡಿಯನ್ನು ತೆರೆಯಲೂ, ಹತ್ತು ಸಾವಿರ ರೂಪಾಯಿಗಳಿಗೂ ಮೀರದ ಉತ್ಪನ್ನ ಬರುವವರ ಎಲ್ಲಾ ಸಾಲಗಳ ವಸೂಲಿ ಕ್ರಮವನ್ನು ಕನಿಷ್ಠ ಹತ್ತು ವರ್ಷಗಳ ಕಾಲ ಸ್ಥಗಿತಗೊಳಿಸಬೇಕೆಂದೂ, ಶಿಕ್ಷಿತ ಹಾಗೂ ಅಶಿಕ್ಷಿತ ನಿರುದ್ಯೋಗಿಗಳಿಗೆ ತಿಂಗಳಿಗೆ ತಲಾ ರೂ. 50/- ಹಾಗೂ ರೂ. 30/-ರಂತೆ ನಿರುದ್ಯೋಗ ಭತ್ಯೆ ಕೊಡಬೇಕೆಂದು ನಿರ್ಣಯಗಳನ್ನು ಸ್ವೀಕರಿಸಲಾಯಿತು.

ಕೆಳಗಿನ ಪದಾಧಿಕಾರಿಗಳನ್ನುಳ್ಳ ಧಾರವಾಡ ಜಿಲ್ಲಾ ರೈತ, ಕೂಲಿಗಾರರ ಸಂಘಟನಾ ಸಮಿತಿಯನ್ನು ರಚಿಸಲಾಯಿತು. ಅಧ್ಯಕ್ಷರು : ಫಕೀರಪ್ಪ ಹೋತ್ನಳ್ಳಿ, ಉಪಾಧ್ಯಕ್ಷರು: ರಾಮಣ್ಣ ಕ್ಷೌರದ, ಕೋಶಾಧ್ಯಕ್ಷ : ನಾಮಧಾರಿ ಸಾಹೇಬರು, ಕಾರ್ಯದರ್ಶಿಗಳು : ರಾಮಣ್ಣ ಹಡಪದ ಧಾರವಾಡ, ಕನ್ನಗೌಡರ ಹಾವೇರಿ.

●

ಬೆಂಗಳೂರಿನ ಕಾಗದ ಕಾರ್ಖಾನೆಯಲ್ಲಿ ಮುಷ್ಕರ

ಬೆಂಗಳೂರು ನಗರಕ್ಕೆ 24 ಕಿ ಮಿ. ದೂರದಲ್ಲಿರುವ ಅನ್ನಪೂರ್ಣ ಪೇಪರ್ ಮಿಲ್ಲಿನ 250 ಕಾರ್ಮಿಕರು ತಾರೀಕು 9-1-80ರಿಂದ ಮುಷ್ಕರದಲ್ಲಿ ತೊಡಗಿದ್ದಾರೆ. ಕಾರ್ಖಾನೆ ಪ್ರಾರಂಭವಾಗಿ ಆರು ವರ್ಷಗಳಾಗಿದ್ದರೂ ಕಾನೂನು ಪ್ರಕಾರ ಸಿಗಬೇಕಾದ ಸೌಲಭ್ಯಗಳಿಂದ ವಂಚಿತರಾಗಿರುವ ಶ್ರಮಜೀವಿಗಳು ದಿನಕ್ಕೆ ಕೇವಲ ನಾಲ್ಕು ರೂಪಾಯಿಗಳನ್ನು ಪಡೆಯುತ್ತಿದ್ದಾರೆ.

ಸಂಘಟನೆ ಮಾಡಲು ಮುಂದೆ ಬಂದ ಅನೇಕ ಕಾರ್ಮಿಕರ ಮೇಲೆ ಮಾಲೀಕರು ಗೂಂಡಾಗಿರಿ ನಡೆಸಿ, ಕೆಲಸದಿಂದ ಕಿತ್ತು ಹಾಕಿದ್ದಾರೆ. ದಿನ, ದಿನಕ್ಕೆ ಶ್ರಮಭಾರ ಮಾತ್ರ ಹೆಚ್ಚುತ್ತಿದೆ ಇಂತಹ ಪರಿಸ್ಥಿತಿಯಲ್ಲಿ ಕೆಲವು ಕಾರ್ಮಿಕರು ಆಡಳಿತ ವರ್ಗದ ಬಳಿ ಹೋಗಿ ತಮ್ಮ ಸಂಕಷ್ಟಗಳನ್ನು ಹೇಳಿಕೊಂಡು ಸಂಬಳ ಹೆಚ್ಚಿಸುವಂತೆ ಕೇಳಿದರು, ಇದರಿಂದ ಸಿಟ್ಟಿಗೆದ್ದ ಮಾಲೀಕರು ಕೆಲಸವನ್ನು ನಿಲ್ಲಿಸುವಂತೆ ತಿಳಿಸಿ, ಕೂಡಲೇ ಪೋಲೀಸರನ್ನು ಕರೆಸಿ ಕಾರ್ಮಿಕರನ್ನು ಹೊರಗೆ ಹಾಕಿದರು, ಕಾರ್ಮಿಕ ಇಲಾಖೆಗೆ ತಪ್ಪು ಮಾಹಿತಿ ಕೊಟ್ಟು ಕಾರ್ಮಿಕರ ಬೇಡಿಕೆಗಳನ್ನು ಮುರಿಯಲು ಪ್ರಯತ್ನಿಸಿದರು.

ಇದರಿಂದ ಎಚ್ಚೆತ್ತ ಕಾರ್ಮಿಕರು ಸಿ.ಐ.ಟಿ.ಯು. ನೇತೃತ್ವದಲ್ಲಿ ಸಂಘಟಿತರಾದರು. ಸಂಘಟನೆ ಆದುದನ್ನು ಕಂಡ ಮಾಲೀಕರು ಸಂಘದ ಮುಖಂಡರನ್ನು ಕೆಲಸದಿಂದ ವಜಾ ಮಾಡಿದ್ದಾರೆ. ಆಡಳಿತ ವರ್ಗದ ವರ್ತನೆಯನ್ನು ಖಂಡಿಸಿ ಬೇಡಿಕೆಗಳನ್ನು ಮುಂದಿಟ್ಟು ಕಾರ್ಮಿಕರು ಮುಷ್ಕರದಲ್ಲಿದ್ದಾರೆ.

ಹೋರಾಟದಲ್ಲಿರುವ ಕಾರ್ಮಿಕರಿಗೆ ಪ್ರಗತಿಪರ ಸಂಘ, ಸಂಸ್ಥೆಗಳು ಹಾಗೂ ಸಾರ್ವಜನಿಕರು ಹೆಚ್ಚಿನ ರೀತಿಯಲ್ಲಿ ಬೆಂಬಲ ನೀಡಬೇಕೆಂದು ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ವೈಟ್ ಫೀಲ್ಡ್ ಶ್ರೀನಿವಾಸ್ ಕೇಳಿಕೊಂಡಿದ್ದಾರೆ.

○

........ರಾಜಕೀಯಕ್ಕೆ ಹೊಸ ತಿರುವು

[ಒಂದನೇ ಪುಟದಿಂದ]

ಕೇರಳ-ಬಂಗಾಳ-ತ್ರಿಪುರಾ ಮಾದರಿಗೆ ಮುಂದೆ ಬನ್ನಿ :

ಸಭೆಯನ್ನುದ್ದೇಶಿಸಿ ಮಾತನಾಡಿದ ಸಿ.ಪಿ.ಐ.ನ ಕರ್ನಾಟಕ ರಾಜ್ಯ ಮಂಡಳಿಯ ಕಾರ್ಯದರ್ಶಿ ಕಾಂ. ಎಂ.ಎಸ್. ಕೃಷ್ಣನ್ ಅವರು ರಾಜ್ಯ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿದರು. ಬೆಲೆ ಏರಿಕೆಯನ್ನು ತಡೆಗಟ್ಟಲು ಅಶಕ್ತರಾದ ರಾಜ್ಯ ಮುಖ್ಯಮಂತ್ರಿಗಳು ಗಡೀ ಪ್ರಶ್ನೆಯನ್ನು ಮಾತನಾಡುತ್ತಿರುವುದು ಹಾಸ್ಯಾಸ್ಪದ ಎಂದು ಹೇಳಿ ಬೆಲೆ ಏರಿಕೆ ತಡೆಗಟ್ಟಲು ರಾಷ್ಟ್ರದ ನೂರಾಹತ್ತು ಏಕಸ್ವಾಮ್ಯ ಮನೆತನಗಳನ್ನು ಮತ್ತು ಬಹುರಾಷ್ಟ್ರೀಯ ಕಂಪೆನಿಗಳನ್ನೂ ರಾಷ್ಟ್ರೀಕರಿಸಬೇಕೆಂದು ಒತ್ತಾಯ ಮಾಡಿದರು.

ಕಂಪೂಚಿಯಾಕ್ಕೆ ಮಾನ್ಯತೆ ನೀಡುತ್ತೇವೆಂದು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಆಶ್ವಾಸನೆ ಕೊಟ್ಟಿದ್ದರೂ ಸಹ, ಹಾಗೆ ಮಾಡದ ಇಂದಿರಾ ಕಾಂಗ್ರೆಸ್ ಸರ್ಕಾರವನ್ನು ಅತ್ಯುಗ್ರವಾಗಿ ಟೀಕಿಸಿದ ಕಾರ್ಮಿಕ ನಾಯಕ ಕೃಷ್ಣನ್; ಪುರೋಗಾಮಿ ನೀತಿ ಹಾಗೂ ಪ್ರಗತಿಯು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಂದ ಮಾತ್ರ ಸಾಧ್ಯವೆಂದು ನುಡಿದರು. ಕೇರಳ, ಬಂಗಾಳ ಹಾಗೂ ತ್ರಿಪುರಾದಂತಹ ದಕ್ಷ ಮತ್ತು ಪ್ರಗತಿಗಾಮಿ ಸರ್ಕಾರಗಳನ್ನು ಕರ್ನಾಟಕದಲ್ಲೂ ತರಲು ಮುಂದೆ ಬನ್ನಿ ಎಂದು ಕರ್ನಾಟಕದ ರೈತ ಕಾರ್ಮಿಕ ವರ್ಗಕ್ಕೆ ಕೃಷ್ಣನ್ ಕರೆಕೊಟ್ಟರು.

ಸೈದ್ಧಾಂತಿಕ ರಾಜಕಾರಣದ ವಿಜಯ :

ಚಿಕ್ಕಲಾಲ್‌ಬಾಗಿನಲ್ಲಿ ನೆರೆದಿದ್ದ ಬೃಹತ್ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಬಂಡಾಯ ಸಾಹಿತ್ಯ ಸಂಘಟನಾ ಸಮಿತಿಯ ರಾಜ್ಯ ಕಾರ್ಯದರ್ಶಿ ಶ್ರೀ ಬರಗೂರುರಾಮಚಂದ್ರಪ್ಪನವರು ಕೇರಳದ ವಿಜಯವನ್ನು ಸಮಯಸಾಧಕ ರಾಜಕಾರಣದ ವಿರುದ್ಧ ಸೈದ್ಧಾಂತಿಕ ರಾಜಕಾರಣದ ವಿಜಯ ಎಂದು ವಿಶ್ಲೇಷಿಸಿದರು.

ಇಂದಿರಾ ಸರ್ವಾಧಿಕಾರದ ವಿರುದ್ಧ ಧ್ವನಿ ಎತ್ತುವ ಬುದ್ಧಿಜೀವಿಗಳು ಶೋಷಿತರ ಹೋರಾಟ ನಡೆಯುವಾಗ ಧ್ವನಿ ಎತ್ತುವುದಿಲ್ಲ ಎಂದು ಗುರುತಿಸಿದ ರಾಮಚಂದ್ರಪ್ಪನವರು, ಶೋಷಿತರ ಆಶೋತ್ತರಗಳ ಈಡೇರಿಕೆಯ ಹೋರಾಟದಲ್ಲಿ ಪಾಲ್ಗೊಳ್ಳಲು ಬುದ್ಧಿಜೀವಿಗಳಿಗೆ ಕರೆ ನೀಡಿದರು

ಪ್ರಜಾಪ್ರಭುತ್ವವಾದಿ ಶಕ್ತಿಗಳು ಈ ದೇಶದಲ್ಲಿ ಜೀವಂತವಾಗಿವೆ ಎಂಬುದನ್ನು ಕೇರಳ ಚುನಾವಣಾ ಫಲಿತಾಂಶ ತೋರಿಸಿ ಕೊಟ್ಟಿದೆ ಎಂದು ಸಂತಸಪಟ್ಟ ರಾಮಚಂದ್ರಪ್ಪನವರು ಕ್ರೂರ ಮತ್ತು ವಿಕೃತವಾಗಿರುವ ಪ್ರಸಕ್ತ ಆರ್ಥಿಕ ವ್ಯವಸ್ಥೆಯ ವಿರುದ್ಧ ಹೋರಾಡಿ ದುಡಿಯುವ ಜನತೆಗೆ ಅರ್ಥಪೂರ್ಣವಾದ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವವನ್ನು ತಂದು ಕೊಡುವ ಹೊಸ ವ್ಯವಸ್ಥೆಯ ನಿರ್ಮಾಣವಾಗಬೇಕಾಗಿದೆ ಎಂದರು.

ಇಂದು ಬಂಗಾಳದಲ್ಲಾಗುವುದು ನಾಳೆ ಇಡೀ ಭಾರತದಲ್ಲಿ ಆಗುತ್ತದೆ ಎಂಬ ಜನಪ್ರಿಯ ಮಾತಿನೊಂದಿಗೆ ಭಾಷಣ ಆರಂಭಿಸಿದ ಅರಸು ಕಾಂಗ್ರೆಸ್ಸಿನ ಕರ್ನಾಟಕ ಶಾಖೆಯ ಶ್ರೀ ಹಾರ್ನಹಳ್ಳಿ ರಾಮಸ್ವಾಮಿಯವರು ಕೇರಳದ ವಿಜಯದ ಬಗ್ಗೆ ಸಂತಸಪಟ್ಟು ಆ ರಾಜ್ಯದ ಜನತೆಗೆ ಅಭಿನಂದನೆ ಸಲ್ಲಿಸಿದರು ಬೆಳಿಗ್ಗೆ ಒಂದು ಥರ, ಮಧ್ಯಾಹ್ನ ಮತ್ತೊಂದು ಥರ, ಸಂಜೆಗೆ ಇನ್ನೂ ಒಂದು ಥರ ಮಾತನಾಡುವವರು ಈಗ ರಾಜ್ಯದಲ್ಲಿ ಅಧಿಕಾರ ನಡೆಸುವಂತಾಗಿದೆ ಎಂದು ವ್ಯಸನಪಟ್ಟ ರಾಮಸ್ವಾಮಿಯವರು. ಅರಸು ಸರ್ಕಾರದ ಸಾಧನೆಗಳನ್ನು ಶ್ಲಾಘಿಸಿದರು. ಚುನಾವಣೆಗಳಿಗೆ ಮಾತ್ರ ಮೀಸಲಿಲ್ಲದ ಎರಡೂ ಕಮ್ಯುನಿಸ್ಟ್ ಪಕ್ಷಗಳು ಹೇಳುವ ದುಡಿಯುವವರ ರಾಜ್ಯಕ್ಕೆ ರಾಮಸ್ವಾಮಿ ತಮ್ಮ ಬೆಂಬಲ ಸೂಚಿಸಿದರು.

ಕರ್ನಾಟಕ ಪ್ರಗತಿಪರ ಜನರಂಗದ ಸಂಚಾಲಕರಾದ ಡಾ॥ ಜಿ. ರಾಮಕೃಷ್ಣ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದು ಅತಿಥಿಗಳ ಪರಿಚಯ ಮಾಡಿಕೊಟ್ಟರು. ಸಿ.ಪಿ.ಐ ನಾಯಕ ಕಾಂ. ಮುನಿರತ್ನಂ ಸ್ವಾಗತಿಸಿದರು. ಸಿ. ಪಿ. ಐ. (ಎಂ) ನಾಯಕ ಕಾಂ ಟಿ. ಎಸ್. ಅನಂತ ರಾವ್ ವಂದಿಸಿದರು.

ಭಾರತ ಕಮ್ಯುನಿಸ್ಟ್ ಪಕ್ಷದ ಸ್ಥಾಪಕರಲ್ಲಿ ಒಬ್ಬರಾಗಿದ್ದ, ಎ. ಐ. ಟಿ. ಯು. ಸಿ.ಯ ಅಧ್ಯಕ್ಷರೂ ಆಗಿದ್ದ ಕಾಂ. ಮಿರಜ್‌ಕರ್ ಅವರ ನಿಧನಕ್ಕೆ ಸಭೆಯು ಪ್ರಾರಂಭದಲ್ಲಿ ಗೌರವ ಸೂಚಿಸಿ ಸಂತಾಪ ವ್ಯಕ್ತಪಡಿಸಿತು.

ಬೆಂಗಳೂರಿನ ಸಿಲ್ವರ್‌ಜ್ಯೂಬಿಲಿ ಪಾರ್ಕ್‌ನಿಂದ ಸಂಜೆ 5 ಗಂಟೆಗೆ ಹೊರಟು ಕಾರ್ಪೊರೇಷನ್-ಜಿಲ್ಲಾ ಕಛೇರಿರಸ್ತೆ-ಪ್ಯಾಲೇಸ್ ರಸ್ತೆ ಮೂಲಕ ಹಾದು ಗಾಂಧೀನಗರ, ಆನಂದರಾವ್ ಸರ್ಕಲ್, ಟ್ಯಾಂಕ್‌ಬಂಡ್ ರಸ್ತೆ, ಬೆಂಗಳೂರ್ ಬಸ್ ನಿಲ್ದಾಣದ ಮಾರ್ಗವಾಗಿ ಸಾಗಿದ ಸುಮಾರು 3000 ಜನರ ಈ ರ್‍ಯಾಲಿಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಭಾರತ ಕಮ್ಯುನಿಸ್ಟ್ ಪಕ್ಷ, ರೈತಸಂಘ, ಸ್ಟೂಡೆಂಟ್ಸ್ ಫೆಡರೇಶನ್ ಆಫ್ ಇಂಡಿಯಾ, ಎ. ಐ. ಎಸ್. ಎಫ್, ಬಂಡಾಯ ಸಾಹಿತ್ಯ ಸಂಘಟನೆ, ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ. ಮತ್ತಿತರ ಸಂಘ ಸಂಸ್ಥೆಗಳು ಪಾಲ್ಗೊಂಡಿದ್ದವು.

●

ಸಂಪಾದಕೀಯ

[ಒಂದನೇ ಪುಟದಿಂದ]

ಶ್ರೀಸಾಮಾನ್ಯರು ನಿತ್ಯಬಳಸುವ ಇನ್ನೊಂದು ಸಾಮಾಗ್ರಿ ಸೀಮೆಎಣ್ಣೆ. ಈಗ ಅದು ದೊರೆಯುವುದೇ ದುರ್ಲಭವಾಗಿದೆ. ಇದಕ್ಕೆ ಜನರ ಪರದಾಟವನ್ನು ವಿವರಿಸುವುದೂ ಸಾಧ್ಯವಿಲ್ಲ.

ಸರಕಾರದ ಈ ಜನವಿರೋಧಿ ನೀತಿಯನ್ನೆದುರಿಸಲು ಕಾರ್ಮಿಕರೂ, ರೈತರೂ, ಇತರ ಜನ ವಿಭಾಗಗಳೂ ತೀವ್ರ ಪ್ರತಿಭಟಿಸಬೇಕಾಗಿ ವಿನಂತಿಸುತ್ತೇವೆ. ಸಭೆ, ಮೆರವಣಿಗೆ ಮತ್ತು ಪ್ರದರ್ಶನಗಳನ್ನು ಎಲ್ಲ ಕಡೆಗಳಲ್ಲೂ ನಡೆಸಿ ಬೆಲೆಗಳನ್ನು ಇಳಿಸಬೇಕೆಂದೂ ಸಾಕಷ್ಟು ಪ್ರಮಾಣದಲ್ಲಿ ಸಕ್ಕರೆ, ಸೀಮೆಎಣ್ಣೆ, ಕಡಲೇಕಾಯಿಎಣ್ಣೆ ಮುಂತಾದುವುಗಳನ್ನು ನ್ಯಾಯಬೆಲೆಯಲ್ಲಿ ಒದಗಿಸಬೇಕೆಂದೂ ಸಾರ್ವತ್ರಿಕವಾಗಿ ಒತ್ತಾಯ ಬರಬೇಕು. ಜನತೆಯ ಹೋರಾಟದಿಂದಲೇ ಸರಕಾರದ ನೀತಿಯನ್ನು ಬದಲಿಸಲು ಸಾಧ್ಯ. ●

ಜನತಂತ್ರಕ್ಕೆ ಗ್ರಹಣ

[1ನೇ ಪುಟದಿಂದ]

ಹಿಮಾಚಲ ಪ್ರದೇಶಗಳಲ್ಲಿ ನಡೆಸಿದ ರಾಜಕೀಯದಿಂದ ಕೇವಲ ಒಂದು ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆ ಈಗ ಐದು ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿದೆ. ವಿರೋಧ ಪಕ್ಷಗಳು ಜನಗಳ ವಿಶ್ವಾಸವನ್ನು ಕಳೆದುಕೊಂಡಿವೆಯೆಂದು ಹೇಳುವ ಕಾಂಗ್ರೆ ನಾಯಕರು, ತಮ್ಮೆಡೆ ಎಳೆದುಕೊಂಡಿರುವ ಪಕ್ಷಾಂತರಿಗಳನ್ನೂ ಜನತೆಯ ಮುಂದೆ ನಿಲ್ಲಿಸಬೇಕಾಗಿತ್ತು. ಹರಿಯಾಣ, ಹಿಮಾಚಲ ಪ್ರದೇಶ ಮತ್ತು ಕರ್ನಾಟಕದ ವಿಧಾನಸಭೆಗಳನ್ನೂ ವಿಸರ್ಜಿಸಬೇಕಿತ್ತು. ಆದರೆ ಹಾಗಾಗದೆ ಇರುವುದಕ್ಕೆ ಕಾರಣವಿದೆ, ಇಂದಿರಾಗಾಂಧಿಯವರಿಗೆ ಇಡೀ ದೇಶದಲ್ಲಿ ತಮ್ಮ ಮಾತಿಗೆ ತಲೆ ಹಾಕುವ ಸರಕಾರಗಳು ಬೇಕಾಗಿವೆ ವಿನಹಃ ಬೇರೇನೂ ಇಲ್ಲ. ಅಲ್ಲದೆ ರಾಜ್ಯಸಭೆಯಲ್ಲಿ ಅಲ್ಪಸಂಖ್ಯಾಂತ ಗುಂಪಾಗಿರುವ ಕಾಂಗ್ರೆಸ್ (ಐ) ಎರಡೂ ಸದನಗಳಲ್ಲಿ ತಮಗೆ ಬೇಕಾದಂತೆ ಕಾನೂನುಗಳನ್ನು ಮಾಡಲು ಬಹುಮತ ಪಡೆಯುವುದು ಅವಶ್ಯ. ಇದೇ ಮಾರ್ಚಿ31ಕ್ಕೆ ಮೂರನೇ ಒಂದು ಭಾಗದ ಸದಸ್ಯರ ಅವಧಿ ಮುಗಿಯುವುದರಿಂದ ಆ ವೇಳೆಗೆ ಎಲ್ಲಾ ರಾಜ್ಯಗಳಲ್ಲಿ ತಮ್ಮ ಸರಕಾರಗಳು ಅಧಿಕಾರಕ್ಕೆ ಬಂದಲ್ಲಿ ಕೆಲಸ ಹಗುರವೆಂದು ಶ್ರೀಮತಿಗಾಂಧಿಯವರು ಭಾವಿಸಿದ್ದಾರೆ. ಆದರೆ, ಸಂಯುಕ್ತ ವಿರೋಧ ಪಕ್ಷವನ್ನು ವಿರೋಧಿಸಿ ಗೆಲ್ಲುವುದು ಕಾಂಗ್ರೆಗೆ ಅಷ್ಟು ಸುಲಭವಲ್ಲ. ಶ್ರೀಮತಿ ಗಾಂಧಿಯವರ ಯೋಚನೆಗಳೆಲ್ಲಾ ಚುನಾವಣೆಗಳಲ್ಲಿ ತಲೆಕೆಳಗಾಗುವ ಸಂಭವವಿದೆ.

ಒಂಭತ್ತು ರಾಜ್ಯ ಸರಕಾರಗಳ ವಿಸರ್ಜನೆಯಿಂದ ದೇಶದಲ್ಲಿ ಸಿ ಪಿ ಐ. (ಎಂ) ನೇತೃತ್ವದ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳ ಸರಕಾರವಿರುವ ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಮಾತ್ರ ವಿರೋಧ ಪಕ್ಷಗಳ ಆಡಳಿತ ಉಳಿದುಕೊಂಡಿದೆ.

ದೇಶದಲ್ಲಿ ಪ್ರಜಾತಂತ್ರ ಉಳಿದು ಬೆಳೆಯಬೇಕಾದರೆ ಏಕಪಕ್ಷದ, ಏಕವ್ಯಕ್ತಿಯ ಸರ್ವಾಧಿಕಾರವನ್ನು ತಡೆಗಟ್ಟಬೇಕಾದರೆ ಎಲ್ಲಾ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಹೆಚ್ಚು ಐಕ್ಯತೆಯಿಂದ ಕೆಲಸ ಮಾಡಬೇಕು, ರಾಜ್ಯ ಸರ್ಕಾರಗಳನ್ನು ಯಾವುದೇ ಕಾರಣ ನೀಡದೆ, ಮನಸೋಇಚ್ಛೆ ವಜಾ ಮಾಡಲು ಕೇಂದ್ರ ಸರಕಾರಕ್ಕೆ ಅಧಿಕಾರವನ್ನು ನೀಡುವ ಸಂವಿಧಾನದ 356ನೇ ವಿಧಿಯನ್ನು ತಿದ್ದುಪಡಿ ಮಾಡಬೇಕು. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷವೊಂದು ತನಗೆ ಇಷ್ಟ ಬಂದಂತೆ ರಾಜ್ಯಸರಕಾರಗಳ ಜೊತೆ ವರ್ತಿಸುವುದಕ್ಕೆ ಕಡಿವಾಣಹಾಕಲು, ಕೇಂದ್ರ-ರಾಜ್ಯಗಳ ಸಂಬಂಧವನ್ನು ಸಂಪೂರ್ಣವಾಗಿ ಪುನರ್ ಪರಿಶೀಲಿಸಬೇಕು. ಅಂದಾಗ ಮಾತ್ರ ಸರ್ವಾಧಿಕಾರಿ ಪ್ರವೃತ್ತಿಗಳನ್ನು ಸ್ವಲ್ಪವಾದರೂ ತಡೆಗಟ್ಟಲು ಸಾಧ್ಯ.

●

ಯುವಕ ಮಂಡಲದ ಮಹಾಸಭೆ

ದ.ಕ. ಜಿಲ್ಲೆ ಕೋಣಿ ಶಾಲಾ ವಠಾರದಲ್ಲಿ ಯುವಕ ಮಂಡಲ ಕೋಣಿ ಇದರ 4ನೇ ವಾರ್ಷಿಕ ಮಹಾಸಭೆಯು ಫೆಬ್ರವರಿ 17ರಂದು ಶ್ರೀ ಕೆ. ಆನಂದ ಭಂಡಾರಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಮುಖ್ಯ ಅತಿಥಿಗಳಾಗಿ ಶ್ರೀ ಎನ್. ಕೆ. ಹೆಬ್ಬಾರ್ ಕೋಣಿ ಇವರು ಭಾಗವಹಿಸಿದ್ದರು. ಶ್ರೀ ಕೆ. ಮಹಾಬಲ ಕಾರ್ಯದರ್ಶಿ ತಾಲೋಕು ಯುವಕ ಸಮಿತಿ ಮತ್ತು ಶ್ರೀ ಕೆ. ಗಣೇಶ ಕಾರಂತ ಅಧ್ಯಕ್ಷ ಎಸ್. ಎಫ್. ಐ. ಕುಂದಾಪುರ ಘಟಕ ಇವರು ಮಾರ್ಗದರ್ಶನ ಗೈದರು.

1980-81ರ ನೂತನ ಪದಾಧಿಕಾರಿಗಳನ್ನು ಸರ್ವಾನುಮತಿಯಿಂದ ಆರಿಸಲಾಯಿತು. ಸರ್ವಶ್ರೀ ಕೆ. ರಾಧಾಕೃಷ್ಣ (ಅಧ್ಯಕ್ಷ) ಫಿಲಿಪ್ ಡಿ. ಸೋಜ (ಉಪಾಧ್ಯಕ್ಷ), ಕೆ. ಗುರುರಾಜ (ಕಾರ್ಯದರ್ಶಿ) ಜೋನ್ ಡಿ. ಸೋಜ (ಜತೆ ಕಾರ್ಯದರ್ಶಿ) ಕೆ. ವೆಂಕಟೇಶ ನಾಯಕ್, ದಾರ ಕೆ, ಉಮೇಶ, ಎನ್, ಆನಂದ ಭಂಡಾರಿ, ನಾಗೇಂದ್ರ ಐತಾಳ, ನಾರಾಯಣ ಆಚಾರ್ಯ, ಪದಿಯ, ಲಕ್ಷ್ಮಣ, ಚಂದ ಕೆ., ಅಂತ ಹುಣ್ಸೆಕಟ್ಟೆ, ಕೆ. ಎನ್. ಸಂಜಯ (ಸದಸ್ಯರು.)

ಕೊನೆಯಲ್ಲಿ ಕುಂದಾಪುರ ಸಮುದಾಯ ಸದಸ್ಯರಿಂದ ಮನರಂಜನೆ ಕಾರ್ಯಕ್ರಮ ನಡೆಯಿತು. ○

ಸಿ.ಐ.ಟಿ.ಯು. ರಾಜ್ಯಸಮಿತಿ ಸದಸ್ಯರ ಗಮನಕ್ಕೆ

ಕರ್ನಾಟಕ ರಾಜ್ಯ ಸಿ. ಐ. ಟಿ. ಯು. ರಾಜ್ಯಸಮಿತಿ ಸಭೆ ತಾ॥ 2-3-1980 ರಂದು ಬೆಳಿಗ್ಗ ಹತ್ತುಗಂಟೆಗೆ ಕೆ. ವಿ. ಟೆಂಪಲ್ ಸ್ಟ್ರೀಟ್, ಸುಲ್ತಾನ್‌ಪೇಟೆ, ಬೆಂಗಳೂರು ಇಲ್ಲಿ ಕರೆಯಲಾಗಿದೆ. ರಾಜ್ಯ ಸಮಿತಿ ಸದಸ್ಯರು ಸಕಾಲದಲ್ಲಿ ಸಭೆಗೆ ಹಾಜರಾಗಬೇಕು.

ಸಿ. ನಂಜುಂಡಪ್ಪ
ಪ್ರಧಾನ ಕಾರ್ಯದರ್ಶಿ

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಸಮಿತಿ ಸದಸ್ಯರ ಗಮನಕ್ಕೆ

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಸಮಿತಿ ಸಭೆ ತಾ॥ 3-3-80 ರಂದು ಬೆಳಿಗ್ಗ 10 ಗಂಟೆಗೆ ಕಾಶಿ ವಿಶ್ವನಾಥ ದೇವಸ್ಥಾನದ ರಸ್ತೆ, ಸುಲ್ತಾನ್ ಪೇಟೆ, ಬೆಂಗಳೂರು ಇಲ್ಲಿ ಸೇರುವುದು. ರಾಜ್ಯಸಮಿತಿ ಸದಸ್ಯರು ಹಾಗೂ ಆಹ್ವಾನಿತರು ತಪ್ಪದೆ ಕಾಲಕ್ಕೆ ಸರಿಯಾಗಿ ಹಾಜರಿರಬೇಕು.

ಪಿ. ರಾಮಚಂದ್ರರಾವ್
ಪ್ರಧಾನ ಕಾರ್ಯದರ್ಶಿ

ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ಸದಸ್ಯರ ಗಮನಕ್ಕೆ

ಕರ್ನಾಟಕ ರಾಜ್ಯ ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ರಾಜ್ಯಸಭೆ ಬೆಂಗಳೂರಿನಲ್ಲಿ ತಾ॥ 3-3-80ರಂದು ಬೆಳಿಗ್ಗ 10 ಗಂಟೆಗೆ ಪ್ರಾರಂಭವಾಗುವುದು. ಸಭೆ ನಡೆಯುವ ಸ್ಥಳವನ್ನು ಸುಲ್ತಾನ್ ಪೇಟೆಯಲ್ಲಿರುವ ಪಕ್ಷದ ಕಛೇರಿಯಲ್ಲಿ ವಿಚಾರಿಸಿ ಪಡೆದುಕೊಳ್ಳುವುದು.

ಎಸ್. ಮಾಲತಿ
ಸಂಚಾಲಕಿ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT